ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 10 ಸಂಚಿಕೆ 27 ಜುಲೈ 3, 1988 ಬೆಲೆ 1-00

ಒಳಗಿನ ಪುಟಗಳಲ್ಲಿ

ಉಪ ಚುನಾವಣೆಗಳಲ್ಲಿ ವಿರೋಧ ಪಕ್ಷಗಳ ದೊಡ್ಡ ವಿಜಯ

ರಾಜೀವ ಗಾಂಧಿ ರಾಜೀನಾಮೆ ಒತ್ತಾಯ ದೇಶಾದ್ಯಂತ ಪ್ರತಿಧ್ವನಿಸಲಿ

ಲೋಕ ಸಭೆ ಹಾಗೂ ವಿಧಾನಸಭಾ ಉಪ ಚುನಾವಣೆಗಳ ಫಲಿತಾಂಶ ಕಾಂಗ್ರೆಸ್ (ಐ) ಗೊಂದು ದೊಡ್ಡ ಮುಖಭಂಗ. ಚುನಾವಣೆ ನಡೆದ ಎಲ್ಲಾ ಲೋಕಸಭಾ ಸ್ಥಾನಗಳೂ ಕಳೆದ ಇಂದಿರಾ ಸಹಾನುಭೂತಿಯ ಅಲೆಯಲ್ಲಿ ಅದು ಗೆದ್ದಿದ್ದ ಸ್ಥಾನಗಳು ಇವುಗಳಲ್ಲಿ ಎಡರಲ್ಲಿ ಬಿಟ್ಟು ಬೇರೆಲ್ಲಾ ಕಡೆ ಕಾಂಗ್ರೆಸ್ (ಐ) ಸೋತಿದ್ದು ಕಳೆದ ನಾಲ್ಕು ವರ್ಷಗಳಲ್ಲಿ ಜನಭಿಪ್ರಾಯದಲ್ಲಿ ಉಂಟಾಗಿರುವ ತೀವ್ರ ಬದಲಾವಣೆಯನ್ನು ತೋರಿಸುತ್ತದೆ. ಕಾಂಗ್ರೆಸ್ (ಐ)ನ ಭದ್ರನೆಲೆ ಅಲಹಾಬಾದ್‌ನಲ್ಲಿ ವಿ. ಪಿ. ಸಿಂಗ್ ಒಂದು ಲಕ್ಷಕ್ಕೂ ಹೆಚ್ಚು ಅಂತರದಿಂದ ಕಾಂಗ್ರೆಸ್ [ಐ] ಅಭ್ಯರ್ಥಿಯನ್ನು ಸೋಲಿಸಿರುವುದು 1984 ಮತ್ತು 1988 ರ ನಡುವಿನ ಅಂತರವನ್ನು ತೋರಿಸುತ್ತದೆ.

ಗುಜರಾತ್‌ನ ಗೋಹ್ರಾ, ಕ್ಷೇತ್ರದಲ್ಲಿ ವಿರೋಧ ಪಕ್ಷಗಳ ಜಯ ಕೂಡಾ ಇಷ್ಟೇ ಮಹತ್ವದ್ದು. ಹಿಂದುಳಿದ ಕೋಮುಗಳಿಗೆ ಮೀಸಲಾತಿಯ ಬಗ್ಗೆ ದೊಡ್ಡ-ದೊಡ್ಡ ಮಾತುಗಳನ್ನಾಡಿ ರಾಜ್ಯ ವಿಧಾನ ಸಭೆಯನ್ನು ಕೈ ವಶ ಮಾಡಿಕೊಂಡ ಕಾಂಗ್ರೆಸ್ [ಐ] ನಂತರ ಭೂಮಾಲಕರು ಹಾಗೂ ಉಚ್ಛಜಾತಿಯ ಮಧ್ಯಮ ವರ್ಗಗಳ ಒತ್ತಡಕ್ಕೆ ತಲೆಬಾಗಿ ತನ್ನ ವಚನಭಂಗ ಮಾಡಿ ಈಗ ಈ ವಿಭಾಗಗಳ ನಡುವೆ ಬೆಂಬಲ ಕಳಕೊಂಡಂತೆ ಕಂಡು ಬರುತ್ತದೆ. ಮೀಸಲಾತಿ ಹಾಗೂ ಇತರ ಭರವಸೆಗಳ ಆಧಾರದ ಮೇಲೆ ದುರ್ಬಲ ವರ್ಗಗಳ ನಡುವೆ ತನ್ನ ಬೆಂಬಲ ಕಾದುಗೊಳ್ಳಲು ಕಾಂಗ್ರೆಸ್ [ಐ] ಗೆ ಸಾಧ್ಯವಿಲ್ಲ ಎಂಬುದನ್ನು ಇದರಿಂದ ಕಂಡು ಬರುತ್ತದೆ.

ಈ ಉಪ ಚುನಾವಣೆ ಸಾಮಾನ್ಯ ಚುನಾವಣೆಯಾಗಿಲ್ಲ, ಹಠಾತ್ತಾಗಿ ನಡೆದುದೂ ಅಲ್ಲ. ಬೋಫೋರ್ಸ್, ಸಬ್‌ಮೆರಿನ್, ಹಗರಣಗಳು, ವಿ. ಪಿ. ಸಿಂಗ್ ರಾಜೀನಾಮೆ ಹಾಗೂ ವಿರೋಧ ಪಕ್ಷಗಳು ಎತ್ತಿರುವ ಇತರ ಹಲವು ಪ್ರಶ್ನೆಗಳ ನಡುವೆ ಈ ಚುನಾವಣೆಗಳು ನಡೆದವು. ಆದ್ದರಿಂದ ಈ ಫಲಿತಾಂಶಗಳು ಈ ಎಲ್ಲಾ ಪ್ರಶ್ನೆಗಳ ಮೇಲೆ ರಾಜೀವ್‌ಗಾಂಧಿಯ ವಿವರಣೆ ಹಾಗೂ ಘೋರಣೆಗಳ ಒಪ್ಪಲು ಸಾಧ್ಯವಿಲ್ಲ ಎಂದು ಜನತೆ ನೀಡಿರುವ ತೀರ್ಪು. ಆದ್ದರಿಂದ ಪ್ರಜಾಪ್ರಭುತ್ವದ ಯಾವುದೇ ನೀತಿಯ ಪ್ರಕಾರ ರಾಜೀವ್‌ಗಾಂಧಿ ರಾಜೀನಾಮೆ ನೀಡಬೇಕು. ಕಳೆದ ಡಿಸೆಂಬರ್ 9 ರಂದು ಎಡ ಪಕ್ಷಗಳ ನೇತೃತ್ವದಲ್ಲಿ ದೆಹಲಿಯಲ್ಲಿ ಸೇರಿದ್ದ ಹತ್ತು ಲಕ್ಷ ಜನ ಈ ಬೇಡಿಕೆಯೆತ್ತಿದ್ದರು. ಮಾರ್ಚ್ 15ರ ಭಾರತ್ ಬಂದ್ ಇದಕ್ಕೆ ಇಡೀ ದೇಶದ ಬೆಂಬಲವನ್ನು ಸೂಚಿಸಿತ್ತು. ಈಗ ಮತದಾರರೂ ಕೂಡಾ ಈ ಬೇಡಿಕೆ ಸರಿಯೆಂದು ನೇರವಾಗಿ ತೀರ್ಪಿತ್ತಿದ್ದಾರೆ.

ರಾಜೀವ್‌ಗಾಂಧಿ ಈ ಫಲಿತಾಂಶದ ಮಹತ್ವವನ್ನು ಕಡೆಗಣಿಸಲು, ಕಾಂಗ್ರೆಸ್ [ಐ] ಚುನಾವಣೆಗಳಲ್ಲಿ ಚೆನ್ನಾಗಿ ಮಾಡಿದೆ ಎಂದು ನಡೆಸಲು ಸರ್ವ ಪ್ರಯತ್ನ ನಡೆಸುತ್ತಿದ್ದಾರೆ. ಪಂಜಾಬ್ ಹಾಗೂ ಅಸ್ಸಾಂ ಚುನಾವಣೆಗಳಲ್ಲಿ ಸೋತಾಗಲೂ ಇದೇ ರೀತಿ ನಟನೆ ಅವರು ಮಾಡಿದ್ದರು. ತಮ್ಮ

(8 ನೇ ಪುಟ ನೋಡಿ)

ಸೂಚನೆ

ಐಕ್ಯರಂಗದ ಮೇ ವಿಶೇಷಾಂಕ ಮುದ್ರಣ. ಮುದ್ರಣಾಲಯದಲ್ಲಿ ಉಂಟಾದ ಹಲವಾರು ಸಮಸ್ಯೆಗಳ ಕಾರಣದಿಂದ ಸಂಚಿಕೆ ಪ್ರಕಟಣೆಯಾಗಲಿಲ್ಲ. ಓದುಗರಲ್ಲಿ ಹಾಗೂ ಏಜೆನ್ಸಿದಾರರಲ್ಲಿ ಆದ ತೊಂದರೆಗೆ ಕ್ಷಮೆ ಕೋರುತ್ತೇವೆ. ಐಕ್ಯರಂಗದ ಬಾಕಿ ಇರುವ ಏಜೆನ್ಸಿದಾರರು ವ್ಯವಸ್ಥಾಪಕ ಮಂಡಳಿಗೆ ಕೂಡಲೇ ಹಣ ಪಾವತಿ ಮಾಡಬೇಕೆಂದು ವಿನಂತಿಸುತ್ತೇವೆ.

ಸ್ಥಳೀಯ-ಸಂಸ್ಥೆಗಳ ಚುನಾವಣೆಯಲ್ಲಿ ಜನತಾಕ್ಕೆ ಬೆಂಬಲ

ಜುಲೈ ಮೂರರಂದು ನಡೆಯುವ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತು ಮತೀಯ ಶಕ್ತಿಗಳನ್ನು ಸೋಲಿಸಲು ಜನತಾ ಪಕ್ಷಕ್ಕೆ ಮತ ನೀಡಬೇಕೆಂದು ಸಿ.ಪಿ.ಐ (ಎಂ) ರಾಜ್ಯ ಸಮಿತಿ ನಗರ ಸಭೆ ಕಾರ್ಪೊರೇಷನ್, ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತ್ ಸದಸ್ಯರಿಗೆ ಕರೆ ನೀಡಿದೆ.

ಪ್ರೌಢಶಾಲಾ ಸಹ ಶಿಕ್ಷಕರ ಹೋರಾಟಕ್ಕೆ ಬೆಂಬಲ

ರಾಜ್ಯದ ಪ್ರೌಢಶಾಲಾ ಶಿಕ್ಷಕರು ತಮ್ಮ ಬೇಡಿಕೆಗಳನ್ನು ಒಪ್ಪಿಕೊಳ್ಳುವಂತೆ ಸರಕಾರವನ್ನು ಒತ್ತಾಯಿಸಲು ಮೌಲ್ಯಮಾಪನ ಕೆಲಸಕ್ಕೆ ಬಹಿಷ್ಕಾರ ಹಾಕಿದ್ದಾರೆ ಅವರ ಬೇಡಿಕೆಗಳನ್ನು ಚರ್ಚೆ ಸೌಹಾರ್ದಯುತವಾಗಿ ಬಗೆಹರಿಸಬೇಕೆಂದು ಜೂನ್ 30 ರಂದು ಸೇರಿದ ಸಿ ಪಿ ಐ (ಎಂ) ಕರ್ನಾಟಕ ರಾಜ್ಯ ಸಮಿತಿ ಸರ್ಕಾರವನ್ನು ಒತ್ತಾಯ ಪಡಿಸಿದೆ. ಸರಕಾರ ನೇರ ಚರ್ಚೆ ನಡೆಸದೆ ಮುಷ್ಕರವನ್ನು ಮುರಿಯುವ ರೀತಿಯ ಕ್ರಮ ಕೈಗೊಳ್ಳುವುದು ಸರಿಯಲ್ಲವೆಂದು ರಾಜ್ಯ ಸಮಿತಿ ಅಭಿಪ್ರಾಯ ಪಟ್ಟಿದೆ. ಶಿಕ್ಷಕರ ಮೇಲೆ ಲಾಠಿ ಚಾರ್ಜ ಮಾಡುವ ಸುಗ್ರೀವಾಜ್ಞೆಯ ಮೂಲಕ ಮೌಲ್ಯ ಮಾಪನ ಕೆಲಸ ಬಹಿಷ್ಕರಿಸುವುದನ್ನು ನಿಷೇಧಿಸುವ ಸುಗ್ರೀವಾಜ್ಞೆ ಹೊರಡಿಸುವ ಸರ್ಕಾರದ ನಿರ್ಧಾರವನ್ನು ಸಮಿತಿ ಖಂಡಿಸಿದೆ. ಜೂನ್ ತಿಂಗಳಲ್ಲಿ ನಡೆದ ಸಪ್ಲಿಮೆಂಟರಿ ಪರೀಕ್ಷೆಯಲ್ಲಿ ಹಾಜರಾಗಿದ್ದ ಸುಮಾರು 2 ಲಕ್ಷ ವಿದ್ಯಾರ್ಥಿಗಳ ಭವಿಷ್ಯವನ್ನು ಗಮನಿಸಿ ಸರಕಾರ ಮತ್ತು ಶಿಕ್ಷಕರ ಸಂಘ ಆದಷ್ಟು ಬೇಗ ತಮ್ಮ ಸಮಸ್ಯೆಗಳನ್ನು ಸೌಹಾರ್ದಯುತವಾಗಿ ಬಗೆಹರಿಸಿಕೊಳ್ಳುತ್ತಾರೆಂಬ ಆಶಯವನ್ನು ರಾಜ್ಯ ಸಮಿತಿ ವ್ಯಕ್ತ ಮಾಡಿದೆ.

ಹತ್ತಿ ಗಿರಣಿ ಕಾರ್ಮಿಕರಿಗೆ ಬೆಂಬಲ

ರಾಷ್ಟ್ರೀಯ ಹತ್ತಿಗಿರಣಿ ಕಾರ್ಪೊರೇಷನ್ ನಡೆಸುತ್ತಿರುವ ಬೆಂಗಳೂರಿನ, ಮಿನರ್ವಾ ಮಿಲ್ಲನ್ನು ಲಾಕೌಟ್ ಮಾಡಿ 2500 ಕ್ಕಿಂತಲೂ ಹೆಚ್ಚು ಕಾರ್ಮಿಕರನ್ನು ಬೀದಿ ಪಾಲು ಮಾಡಲಾಗಿದೆ. ಮಿಲ್ಲನ್ನು ಆಧುನಿಕರಣ ಗೊಳಿಸಲು ಹಾಗೆಯೇ ಬದ್ಲಿ ಕೆಲಸಗಾರರಿಗೆ ಕೆಲಸ ನಿರಾಕರಿಸುವ ಪ್ರಯತ್ನ ನಡೆದಾಗ ಕೆಲಸಗಾರರು ಅದನ್ನು ಪ್ರತಿಭಟಿಸಿದಾಗ ಲಾಕೌಟ್ ಸಾರಲಾಯಿತು. ಅದರ ವಿರುದ್ಧ ಕಾರ್ಮಿಕರು ಪ್ರತಿಭಟನೆ ಮಾಡಿದಾಗ ನೂರಾರು ಕೆಲಸಗಾರರನ್ನು ಬಂಧಿಸಲಾಗಿದೆ. ಕಾರ್ಮಿಕರ ನ್ಯಾಯಯುತವಾದ ಹೋರಾಟಕ್ಕೆ ಸಿ.ಪಿ ಐ (ಎಂ) ರಾಜ್ಯ ಸಮಿತಿ ಬೆಂಬಲ ನೀಡಿದೆ. ಮ್ಯಾನೇಜ್‌ಮೆಂಟ್ ಕಾರ್ಮಿಕ ವಿರೋಧಿ ನೀತಿಯನ್ನು ಬಿಟ್ಟು ಕೊಟ್ಟು ಕೆಲಸಗಾರರ ಬೇಡಿಕೆಗಳನ್ನೊಪ್ಪಿಕೊಂಡು ಕೂಡಲೇ ಹತ್ತಿ ಗಿರಣಿಯನ್ನು ಪುನರಾರಂಭಿಸಬೇಕೆಂದು ಒತ್ತಾಯ ಪಡಿಸಿದೆ.

ರಾಜ್ಯದಲ್ಲಿರುವ 7 ಸಹಕಾರಿ ನೂಲಿನ ಗಿರಣಿಗಳ ಪೈಕಿ 4 ಗಿರಣಿ

[8 ನೇ ಪುಟ ನೋಡಿ]

ಗುಂಪುಗಾರಿಕೆ ಬಿಟ್ಟು ಒಂದಾಗಿ ಜನತಾ ಮುಖಂಡರಿಗೆ ಪಕ್ಷದ ಕರೆ

1988 ಏಪ್ರಿಲ್ 23-24 ರಂದು ಹುಬ್ಬಳ್ಳಿಯಲ್ಲಿ ಸೇರಿದ ಸಿ ಪಿ ಐ (ಎಂ) ರಾಜ್ಯ ಸಮಿತಿ ಸಭೆ ರಾಜ್ಯದ ಪ್ರಸ್ತುತ ರಾಜಕೀಯ ಪರಿಸ್ಥಿತಿಯನ್ನು ಕುರಿತು ಚರ್ಚಿಸಿದ ಸಮಿತಿಯು ರಾಜ್ಯ ಜನತಾ ಪಕ್ಷದಲ್ಲಿನ ಬಿಕ್ಕಟ್ಟು ರಾಷ್ಟ್ರಮಟ್ಟದಲ್ಲಿ ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳು ರಾಜೀವಗಾಂಧಿ ಸರ್ಕಾರದ ರಾಜೀನಾಮೆಗಾಗಿ, ಮಧ್ಯಂತರ ಚುನಾವಣೆಗಾಗಿ, ಮತ್ತು ಒಂದು ಕನಿಷ್ಟ ಕಾರ್ಯಕ್ರಮದ ಆಧಾರದಲ್ಲಿ ಒಂದು ಜಾತ್ಯಾತೀತ ಪ್ರಜಾಪ್ರಭುತ್ವವಾದಿ ಬದಲಿಯನ್ನು ರೂಪಿಸಲು ನಡೆಸುತ್ತಿರುವ ಪ್ರಯತ್ನಗಳ ಮೇಲೆ ಹಾನಿಕಾರಕ ಪರಿಣಾಮ ಬೀರಲಿದೆ" ಎಂಬ ಅಭಿಪ್ರಾಯ ವ್ಯಕ್ತ ಮಾಡಿತ್ತು.

ಹಾಗೆಯೇ ಅದು ರಾಜ್ಯದ ಜನತಾ ಪಕ್ಷಕ್ಕೆ ಒಂದು ಎಚ್ಚರಿಕೆಯನ್ನು ನೀಡುತ್ತ "ಜನತಾ ಪಕ್ಷವು ತಮ್ಮೊಳಗೆ ಐಕ್ಯತೆಯನ್ನು ಸಾಧಿಸದೆ ಹೋದರೆ ಮತ್ತು ಜನತೆಯ ಸಮಸ್ಯೆಗಳ ಪರಿಹಾರಕ್ಕೆ ಕಂಕಣಬದ್ಧವಾಗಿ ನಿಲ್ಲದೆ ಹೋದರೆ ಕಾಂಗ್ರೆಸ್ ಸರ್ವಾಧಿಕಾರದ ವಿರುದ್ಧ ರಾಜ್ಯದ ಜನತೆ ವ್ಯಕ್ತಪಡಿಸಿದ ವಿಶ್ವಾಸಕ್ಕೆ ದ್ರೋಹ ಮಾಡಿದಂತಾಗುತ್ತದೆಂದೂ" ಎಚ್ಚರಿಸಿತ್ತು.

ಜೂನ್ 30 ರಂದು ಬೆಂಗಳೂರಿನಲ್ಲಿ ಕಾ. ಎನ್. ಕೆ. ಉಪಾಧ್ಯಾಯರ ಅಧ್ಯಕ್ಷತೆಯಲ್ಲಿ ಸೇರಿದ ರಾಜ್ಯ ಸಮಿತಿ ಸಭೆ,ತಮ್ಮ ಏಪ್ರಿಲ್ ತಿಂಗಳ ಸಭೆಯಲ್ಲಿ, ಜನತಾ ಪಕ್ಷದ ಮುಖಂಡರಿಗಿತ್ತ ಎಚ್ಚರಿಕೆಯನ್ನು ಅವರು ಗಣನೆಗೆ ತೆಗೆದುಕೊಳ್ಳದೆ, ತಮ್ಮ ಗುಂಪುಗಾರಿಕೆಯನ್ನು ತೀವ್ರಗೊಳಿಸಿಕೊಂಡು ಹೋಗುತ್ತಿರುವುದು ಮಾತ್ರವಲ್ಲ ಬಹಿರಂಗವಾಗಿ ಪತ್ರಿಕಾ ಹೇಳಿಕೆ, ಸಾರ್ವಜನಿಕ ಸಭೆಗಳಲ್ಲಿ ಭಾಷಣಗಳ ಮೂಲಕ ಒಬ್ಬರನ್ನೊಬ್ಬರು ಅವಹೇಳನ ಮಾಡಿಕೊಳ್ಳುತ್ತಿರುವುದರ ಕುರಿತು ಅಸಮಾಧಾನ ವ್ಯಕ್ತಪಡಿಸಿದೆ. ಮಾತ್ರವಲ್ಲ ಅವರ ಜಗಳದ ಪರಿಣಾಮ

[8 ನೇ ಪುಟ ನೋಡಿ]

ವಿದೇಶಿ ಸಾಲದ ಸುಳಿಯಲ್ಲಿ ಭಾರತ

– ಶರತ್ ಚಂದ್ರ

ಭಾರತ ವಿದೇಶಿ ಸಾಲದ ಸುಳಿಯಲ್ಲಿ ಸಿಕ್ಕು ಇನ್ನಷ್ಟು ಮುಳುಗುತ್ತಿದೆ ಸರ್ಕಾರ ಇದರ ಬಗ್ಗೆ ನಿರ್ಲಕ್ಷದಿಂದಿರುವುದು ಮಾತ್ರವಲ್ಲದೆ, ಈ ಬಗ್ಗೆ ಜನತೆಗೆ ಪಾರ್ಲಿಮೆಂಟಿಗೆ ಸುಳ್ಳು ಅಂಕೆ ಸಂಖ್ಯೆ ಕೊಡುವ ಮೂಲಕ ಮರೆ ಮಾಚುತ್ತಿದೆ. ಇತ್ತೀಚೆಗೆ ಅರ್ಥ ರಾಜ್ಯಮಂತ್ರಿ ಶ್ರೀಎಡ್ವರ್ಡ್ ಫಲೆರೋ ಪಾರ್ಲಿಮೆಂಟಿಗೆ ನೀಡಿದ ಹೇಳಿಕೆಯಿಂದ ಇದು ಸ್ಪಷ್ಟವಾಗಿದೆ.

ಅವರ ಹೇಳಿಕೆಯ ಪ್ರಕಾರ ಒಟ್ಟು ರಾಷ್ಟ್ರೀಯ ಉತ್ಪನ್ನದ ಶೇಕಡಾ 14 ! ವಿದೇಶಿ ಸಾಲ ಬಾಕಿ ಇದೆ. ಇದು ಸುಮಾರು 36,541 ಕೋಟಿ (30 ಶತಕೋಟಿ ಡಾಲರುಗಳು)ನಷ್ಟಾಗುತ್ತದೆ. 1986–87ರ ಸಾಲಿಗೆ ಆದರೆ ಬೇರೆ ಕೆಲವು ವಿದೇಶಿ ಸಂಸ್ಥೆಗಳು ಅಂದಾಜು ಮಾಡಿರುವ ಸಾಲದ ಹೊರೆ ಇನ್ನಷ್ಟು ಹೆಚ್ಚು. ಉದಾಹರಣೆಗೆ ವಿಶ್ವ ಬ್ಯಾಂಕಿನ ಪ್ರಕಾರ 1987 ಮಾರ್ಚ್ ಹೊತ್ತಿಗೆ ಸಾಲದ ಹೊರೆ 41 ಶತಕೋಟಿ ಡಾಲರ್. ವಾಷಿಂಗ್‌ಟನ್‌ನಲ್ಲಿರುವ ಅಂತರಾಷ್ಟ್ರೀಯ ಆರ್ಥಿಕ ಇನ್‌ಸ್ಟಿಟ್ಯೂಟ್ (ಐ.ಐ.ಎಫ್)ನ ಅಂದಾಜು 47 ಶತಕೋಟಿ ಡಾಲರುಗಳು. ಈ ಹಲವು ಅಂದಾಜುಗಳು ಬೇರೆ ಬೇರೆಯಾಗುವುದು. ಯಾವು ಯಾವುದನ್ನು ವಿದೇಶಿ ಸಾಲವೆಂದು ಪರಿಗಣಿಸಲಾಗುತ್ತದೆ ಎಂಬುದರ ಮೇಲೆ ಅವಲಂಬಿಸಿದೆ.

ಸರ್ಕಾರಿ ಅಂದಾಜು ಕಡಿಮೆ ಹೇಗೆ?

ಸರ್ಕಾರ ಸಾಲದ ಹೊರೆ ಬಗ್ಗೆ ಕೊಡುವ ಅಂಕೆ ಸಂಖ್ಯೆಗಳು ನಿಜವಾದ ಸಾಲದ ಹೊರೆಗಿಂತ ಕಡಿಮೆಯಾಗಲು ಹಲವು ಕಾರಣಗಳನ್ನು ಕೊಡಬಹುದು.

ಮೊದಲನೆಯದಾಗಿ, ಅನಿವಾಸಿ ಭಾರತೀಯರು (ಮುಖ್ಯವಾಗಿ ಕೈಗಾರಿಕೋದ್ಯಮಿಗಳು) ಕಳಿಸುವ ಹಣವನ್ನು ಸಾಲವೆಂದೇ ತೆಗೆದುಕೊಳ್ಳಬೇಕಾಗುತ್ತದೆ. ಯಾಕೆಂದರೆ ಇದು ಭಾರತದಲ್ಲಿದ್ದಷ್ಟು ಅವಧಿಗೆ ಇದಕ್ಕೆ ಬಡ್ಡಿ ಕೊಡಬೇಕಾಗುತ್ತದೆ. ಈ ಹಣವನ್ನು ಯಾವುದೇ ಸಮಯದಲ್ಲಿ ವಾಪಸು ವಿದೇಶಕ್ಕೆ ಒಯ್ಯಬಹುದು. ಇಂತಹ ಏರು ಪೇರುಗಳು ದೇಶದ ಆರ್ಥಿಕ ಕೊಡು–ಕೊಳ್ಳುವ ವ್ಯವಹಾರವನ್ನು ಬುಡ ಮೇಲು ಮಾಡಬಹುದು.

ಭಾರತಕ್ಕೆ ಸರಕುಗಳ ಆಮದಿಗೆ ವಿದೇಶಿ ಕಂಪನಿಗಳು ಕೊಡುವ ಸಾಲವನ್ನು ಸರ್ಕಾರಿ ಅಂಕೆಗಳು ಬಿಟ್ಟು ಬಿಡುತ್ತವೆ. ಇದನ್ನು ನಿರ್ದಿಷ್ಟ ಅವಧಿಯಲ್ಲಿ ಪಾವತಿ ಮಾಡಬೇಕಾಗಿರುವುದರಿಂದ ಇದು ಸಾಲವೇ.

ಐ ಎಂ.ಎಫ್. ನಿಂದ ತೆಗೆದುಕೊಳ್ಳುವ ಸಾಲವನ್ನು ಸಹ 'ತಾಂತ್ರಿಕ' ಕಾರಣಗಳಿಗಾಗಿ ಸರ್ಕಾರಿ ಅಂಕಿ ಅಂಶಗಳು ಸಾಲದ ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲ! ಈ ತಾಂತ್ರಿಕ ಕಾರಣ ಏನೆಂದರೆ ಐ ಎಂ.ಎಫ್. ಸಾಲ ವಿದೇಶಿ ಹಣವನ್ನು ರೂಪಾಯಿ ಕೊಟ್ಟು ಕೊಂಡಂತೆ. ಇದೇ ರೀತಿ ಸರ್ಕಾರದ ಪ್ರಕಾರ ಐ.ಎಂ.ಎಫ್ ಸಾಲ ಮರುಪಾವತಿ ಸಹ ವಿದೇಶಿ ಹಣ ಕೊಟ್ಟು ರೂಪಾಯಿ ಖರೀದಿ ಮಾಡಿದಂತೆ.

ಆದ್ದರಿಂದ ಸರ್ಕಾರಿ ಅಂಕಿ ಅಂಶಗಳು ನಿಜವಾದ ಸಂಖ್ಯೆಗಿಂತ ಬಹಳಷ್ಟು ಕಡಿಮೆ. ಆದರೆ ಸರ್ಕಾರವಾಗಲಿ, ವಿಶ್ವಬ್ಯಾಂಕ್ ಐಐಎಫ್‌ಆಗಲಿ ಯಾವು ಯಾವುದನ್ನು ತಮ್ಮ ಅಂಕಿ ಅಂಶಗಳಲ್ಲಿ ವಿದೇಶಿ ಸಾಲವಾಗಿ ಪರಿಗಣಿಸುತ್ತದೆ ಎಂದು ಸ್ಪಷ್ಟವಾಗಿ ತಿಳಿಸುವುದಿಲ್ಲ. ಆದರೆ ಇಷ್ಟಂತೂ ಸ್ಪಷ್ಟ ಸದ್ಯದ ದೇಶದ ಸಾಲದ ಹೊರೆ 40 ಶತಕೋಟಿ ಡಾಲರುಗಳಿಗಿಂತಲೂ ಹೆಚ್ಚು.

ಸಾಲದ ಹೆಚ್ಚಳ

ವಿದೇಶಿ ಸಾಲದ ಹೊರೆಯ ಬಗ್ಗೆ ಇನ್ನೂ ಹಲವು ಸಂಗತಿಗಳು ಗಾಬರಿ ಹುಟ್ಟಿಸುವಂತಹುದು. 1982-87ರ 5 ವರ್ಷಗಳಲ್ಲಿ ಸಾಲದ ಹೊರೆ ಇಮ್ಮಡಿಗಿಂತಲೂ ಹೆಚ್ಚಾಗಿದೆ. (ಐ.ಐ.ಎಫ್ ಮತ್ತು ವಿಶ್ವಬ್ಯಾಂಕ್ ಅಂಕಿ ಅಂಶಗಳ ಪ್ರಕಾರ) ಅದರಲ್ಲೂ ವಿದೇಶಿ ಸಾಲದಲ್ಲಿ ಖಾಸಗಿ ಮೂಲಗಳಿಂದ ತೆಗೆದುಕೊಂಡ ಸಾಲದ ಭಾಗ ಬಹಳಷ್ಟು ಏರಿದೆ. ವಿಶ್ವಬ್ಯಾಂಕ್ ಅಂಕೆ ಸಂಖ್ಯೆ ಪ್ರಕಾರ ಖಾಸಗಿ ಮೂಲಗಳಿಂದ ಸಾಲ ಒಟ್ಟು ವಿದೇಶಿ ಸಾಲದ ಶೇಕಡಾ ಭಾಗದಷ್ಟು ಭಾಗ 1974–75 ರಲ್ಲಿದ್ದು, 1980-81ರಲ್ಲಿ ಶೇಕಡಾ 14.4 ಕ್ಕೇರಿದರೆ, 1984-85ರಲ್ಲಿ ಶೇಕಡಾ 40 ಆಗಿದೆ.

ಖಾಸಗಿ ಮೂಲಗಳಿಂದ ತೆಗೆದುಕೊಂಡ ಸಾಲ ಯಾವಾಗಲೂ ದೇಶಕ್ಕೆ ಭಾರೀ ದುಬಾರಿ. ಅಧಿಕೃತ ಮೂಲಗಳಿಂದ ತೆಗೆದುಕೊಂಡ ಸಾಲದ ಮರುಪಾವತಿ ಅವಧಿ 30 ವರ್ಷಗಳಾದರೆ ಖಾಸಗಿ ಸಾಲದ್ದು ಹೆಚ್ಚಾಗಿ 9-12 ವರ್ಷಗಳಷ್ಟೇ ಇರುತ್ತದೆ. ಖಾಸಗಿ ಮೂಲದ ಸಾಲಗಳಲ್ಲಿ ಬಡ್ಡಿ ದರವೂ ಹೆಚ್ಚು. ಸಾಲ ಮನ್ನಾ ಮಾಡುವ ಸಾಧ್ಯತೆ ಸಹ ಕಡಿಮೆ. ಇವೆರಡೂ ಸಂಗತಿಗಳು ಜತೆಗೆ (ಸಾಲದ ಹೆಚ್ಚಳ ಅದರಲ್ಲೂ ಖಾಸಗಿ 'ಪಾಲುಏರಿಕೆ' ದೇಶದಅಂತರಾಷ್ಟ್ರೀಯಕೊಡು–ಕೊಳ್ಳುವ ವ್ಯವಹಾರದ ಸಮತೋಲನಕ್ಕೆ ಅಪಾಯಕಾರಿಯಾದುವು

ಸಾಲದ ಮರುಪಾವತಿ

ದೇಶದ ಒಟ್ಟು ರಫ್ತಿನ ಎಷ್ಟುಭಾಗ ಸಾಲದ ಮರುಪಾವತಿಗೆ ಖರ್ಚಾಗುತ್ತದೆ ಎಂಬ ಅಂಕೆ ಸಂಖ್ಯೆಗಳದ್ದೂ ಅದೇ ಗೋಳು. ಕರಾರುವಾಕ್ಕಾದ ಸರ್ಕಾರಿ ಅಂಕೆ-ಸಂಖ್ಯೆಗಳು ಇಲ್ಲ. ಸರ್ಕಾರಿ ಅಂಕೆ ಸಂಖ್ಯೆಗಳು ನಿಜವಾದ ಪರಿಸ್ಥಿತಿಯನ್ನು ಕಡಿಮೆ ಅಪಾಯಕಾರಿ ಎಂದು ತೋರಿಸುವ ಪ್ರಯತ್ನ ಮಾಡುತ್ತವೆ.

ಅಧಿಕೃತ ಅಂಕಿ ಅಂಶಗಳು ವಿದೇಶಿ ಖಾಸಗಿ ಸಾಲದ ಮರುಪಾವತಿಯನ್ನು ಒಳಗೊಂಡಿಲ್ಲ.

ಅಧಿಕೃತ ಅಂಕಿ ಅಂಶಗಳು (1986–87 ರ ಸಾಲಿಗೆ) ಸಾಲದ ಮರುಪಾವತಿ ಒಟ್ಟು ರಫ್ತಿನ ಶೇಕಡಾ 22 ರಷ್ಟು ಎಂದರೆ ಐ ಐ ಎಫ್ ಶೇಕಡಾ 33. ಎಂದೂ ವಿಶ್ವಬ್ಯಾಂಕ್ ಶೇಕಡಾ 25 ಎಂದೂ ಹೇಳುತ್ತವೆ. ಆದ್ದರಿಂದ ನಿಜವಾದ ಅಂಕಿ–ಅಂಶ ಸರ್ಕಾರದ್ದಕ್ಕಿಂತ ಹೆಚ್ಚಿದೆ ಎಂಬುದಂತೂ ಸ್ಪಷ್ಟ.

ಅಲ್ಲದೆ ಸಾಲದ ಮರುಪಾವತಿಯ ಭಾಗ ಸತತವಾಗಿ ಏರುತ್ತಿದೆ ಮತ್ತು ಇನ್ನೂ ಏರುತ್ತದೆ. ವಿಶ್ವಬ್ಯಾಂಕ್‌ನ ಪ್ರಕಾರ 1980-81 ರಲ್ಲಿ ಶೇಕಡಾ 10 ಇದ್ದಿದ್ದು, 1986-87 ರಲ್ಲಿ ಶೇಕಡಾ 25 ಕ್ಕೆ ಏರಿದೆ. ಈಗಾಗಲೇ ಹೇಳಿದ ಹಾಗೆ, ಕಡಿಮೆ ಅವಧಿಯ ಖಾಸಗಿ ಸಾಲದ ಭಾಗ ಹೆಚ್ಚಾಗಿರುವುದರಿಂದ ಮತ್ತು ಇಂತಹ ಸಾಲಗಳು ಹೆಚ್ಚಾಗಿ 80 ರ ದಶಕದ ಆರಂಭದಲ್ಲಿ ತೆಗೆದುಕೊಂಡಿದ್ದು ಇನ್ನು ಒಂದೆರಡು ವರ್ಷಗಳಲ್ಲಿ ಮರುಪಾವತಿ ಆರಂಭವಾಗಬೇಕಾಗುತ್ತದೆ. ಈಗಾಗಲೇ ರಫ್ತಿನ ಮೂರನೇ ಒಂದು ಭಾಗ ಸಾಲದ ಮರುಪಾವತಿಗೆ ಖರ್ಚಾಗುತ್ತಿದ್ದರೆ, ಈ ಹೆಚ್ಚಳದ ನಂತರ ಹೆಚ್ಚು ಕಡಿಮೆ ಇಡೀ ಭಾಗವನ್ನು ತಿಂದು ಹಾಕುವ ಸಾಧ್ಯತೆ ಇದೆ. ಇದು ಆದಾಗ ಭಾರತದ ಸಾಲದ ಸುಳಿಯಲ್ಲಿ ಪೂರ್ಣವಾಗಿ ಖರ್ಚಾಗುವ ಸಾಧ್ಯತೆ ಇಲ್ಲದೆ ಮುಳುಗಿದಂತೆ.

ಹೆಚ್ಚುತ್ತಿರುವ ಹೊರೆ

ವಿಶ್ವಬ್ಯಾಂಕ್‌ನ ಅಂದಾಜಿನ ಪ್ರಕಾರ 1987–1991ರ ಅವಧಿಯಲ್ಲಿ ಸಾಲದ ಮರುಪಾವತಿಯ ಪ್ರಮಾಣ ಶೇಕಡಾ 40 ರಷ್ಟು ಹೆಚ್ಚಲಿದೆ—269 ಕೋಟಿ ಡಾಲರುಗಳಿಂದ 375 ಕೋಟಿ ಡಾಲರುಗಳಿಗೆ ನಮ್ಮ ರಫ್ತು ರೂಪಾಯಿ ಮೌಲ್ಯದ ಆಧಾರದಲ್ಲಿ ಹೆಚ್ಚಿದ್ದರೂ ವಿದೇಶಿ ಹಣದ ಮಟ್ಟದಲ್ಲಿ ಅಷ್ಟಾಗಿ ಏರಿಲ್ಲ. ರೂಪಾಯಿಯ ಅಪ ಮೌಲ್ಯದಿಂದಾಗಿ. ಇದರ ಅರ್ಥ ರಫ್ತಿನ ಇನ್ನಷ್ಟು ದೊಡ್ಡ ಭಾಗ ಸಾಲದ ಮರುಪಾವತಿಗಾಗಿ ಖರ್ಚಾಗುತ್ತದೆ.

ಇನ್ನೊಂದು ದೃಷ್ಟಿಕೋನದಿಂದ ನೋಡುವುದಾದರೆ ನಮ್ಮ ರಾಷ್ಟ್ರೀಯ ಆದಾಯ ಮೂರುವರೆಯಿಂದ 4 ಶೇಕಡಾದಷ್ಟು ಏರುತ್ತಿದೆ. ಆದರೆ ಸಾಲದ ಮರುಪಾವತಿ ಶೇಕಡಾ 10 ರಷ್ಟು ಏರುತ್ತಿದೆ. ಅಂದರೆ ರಾಷ್ಟ್ರೀಯ ಆದಾಯದ ಹೆಚ್ಚಳವನ್ನು ಸಾಲ ನುಂಗಿಹಾಕುವುದಲ್ಲದೆ, ನಿಜವಾಗಿಯೂ ಅದನ್ನು ಕಡಿಮೆ ಮಾಡುತ್ತದೆ.

ಕೆಲವರು ಅಂತರಾಷ್ಟ್ರೀಯ ಹಣದುಬ್ಬರ, ನಮ್ಮ ಸಾಲದ ಮರುಪಾವತಿಯ ಭಾರವನ್ನು ಕಡಿಮೆ ಮಾಡುತ್ತದೆ ಎಂದು ವಾದಿಸುತ್ತಾರೆ ಇದು ಸತ್ಯಕ್ಕೆ ದೂರವಾದುದು. ನಾವು ರಫ್ತು ಮಾಡುವ ಸರಕುಗಳಿಗೆ ಅಂತರಾಷ್ಟ್ರೀಯ ಬೆಲೆ ಏರಿದರೆ ಮಾತ್ರ ಇದು ಸಾಧ್ಯ. ನಾವು ರಫ್ತು ಮಾಡುವ ಸರಕುಗಳ ಅಂತರಾಷ್ಟ್ರೀಯ ಬೆಲೆ ಏರುತ್ತಿಲ್ಲ.

ನಿಜವಾಗಿಯೂ ಸಾಲದ ಮರುಪಾವತಿ– ರಫ್ತಿನ ಅನುಪಾತವೇ ಸರಿಯಾದ ಮಾಪಕವಲ್ಲ, ಮರುಪಾವತಿಯ ಹೊರೆ ಅಳೆಯಲು. ರಫ್ತನ್ನು ಹೆಚ್ಚಿಸುವುದರಿಂದ ಅಥವಾ ಜನಸಾಮಾನ್ಯರು ಬಳಸುವ ಸರಕುಗಳ ಆಮದಿನ ಕಡಿತದ ಮೂಲಕ ಈ ಅನುಪಾತ ಕಡಿಮೆ ಇರುವಂತೆ ಮಾಡಲು ಸಾಧ್ಯವಿದೆ. ಆದರೆ ಸಾಲದ ಮರುಪಾವತಿ ರಾಷ್ಟ್ರೀಯ ಆದಾಯವನ್ನು ಪೋಲು ಮಾಡುತ್ತದೆ ಎಂಬುದು ನಮಗೆ ಮುಖ್ಯವಾಗುತ್ತದೆ.

ಸಾಲದ ಹೊರೆ ಹೆಚ್ಚಳ ಏಕೆ?

ಕೆಲವು ಆಳುವವರ್ಗದ ಭಟ್ಟಂಗಿ ಅರ್ಥಶಾಸ್ತ್ರಜ್ಞರು, ಸಂಪನ್ಮೂಲಗಳನ್ನು ಹೆಚ್ಚಿಸಲು ವಿದೇಶಿ ಸಾಲ ನಾವು ತೆರಬೇಕಾದ ಬೆಲೆ ಎಂದು ಪರಿಗಣಿಸುತ್ತಾರೆ. ಆದರೆ 80 ರ ದಶಕದಲ್ಲಿ ಎರಡು ಕಾರಣಗಳಿಂದಾಗಿ ಸಾಲದ ಸುಳಿಯಲ್ಲಿ ಭಾರತ ಸಿಕ್ಕಿ ಬಿದ್ದಿದೆ.

ಮೊದಲನೆಯದಾಗಿ, ವಿಶ್ವಬ್ಯಾಂಕ್ ಮತ್ತು ಐ.ಎಂ.ಎಫ್.ಒತ್ತಡದಿಂದಾಗಿ ಆಮದನ್ನು ಉದಾಹರಿಸಲಾಗಿದೆ. ಇದರಿಂದಾಗಿ ಕೆಲವು ಕೈಗಾರಿಕೆಗಳ ಪೂರ್ಣ ಉತ್ಪಾದನಾ ಸಾಮರ್ಥ್ಯ ಬಳಸಲು ಕಡಿವಾಣ ಹಾಕಿದಂತಾಗಿದೆ.

ಎರಡನೆಯದಾಗಿ, ಅಂತರಿಕವಾಗಿ ಸಂಪನ್ಮೂಲಗಳನ್ನು ಸಂಗ್ರಹಿಸಲು ಪ್ರಭುತ್ವಕ್ಕೆ ಅಸಾಧ್ಯವಾಗಿದ್ದು ವಿದೇಶಿ ಮೂಲಗಳಿಗೆ ಅದು ಶರಣು ಹೋಗಿದೆ.

ಇದರ ಅರ್ಥ– ವಿದೇಶೀ ಸಾಲದ ಬಳಕೆಯಾಗಿರುವುದು ಆರ್ಥಿಕ ಉದಾರತೆ, ಸಡಿಲ ಧೋರಣೆಯ ಲಾಭ ಪಡೆದಿರುವ ಉಚ್ಚ ಆದಾಯದ ಗುಂಪುಗಳ ಹಿತರಕ್ಷಣೆಗೆ. ಅಥವಾ ಪುನಃ ಇದೇ ಜನರ ಭೋಗ ಬಳಕೆಯ ಅನಗತ್ಯ ಆಮದಿಗಾಗಿ ದೇಶದಕೈಗಾರಿಕಾ ಸಾಮರ್ಥ್ಯವನ್ನು ಬಳಸುವಲ್ಲಿ ತಡೆ ಸಹ ಒಡ್ಡಿದೆ. ಅಂದರೆ ದೇಶ ಪಡೆದಿರುವ ಭಾರೀ ಪ್ರಮಾಣದ ಸಾಲ ಯಾವುದೇ ರೀತಿಯಲ್ಲಿ ಸಾಮಾನ್ಯ ಜನರ ಬಳಕೆಗೆ ಪ್ರೋತ್ಸಾಹ ನೀಡುವಂತಹುದಲ್ಲ.

ಪೋಲೆಂಡ್ ನಂತಹ ದೇಶಗಳಲ್ಲಿ 70 ರ ದಶಕದಲ್ಲಿ ಭಾರೀ ವಿದೇಶೀ ಸಾಲದ ಹೊರೆ ಇತ್ತು. ಆದರೆ ಇಂತಹ ಸಾಲ ಅಲ್ಲಿ ದುಡಿಯುವ ಜನರ ಜೀವನ ಮಟ್ಟ ಎತ್ತರಿಸಲು ಖರ್ಚಾಯಿತು. ಆದರೆ ಇದು ಭಾರತದಲ್ಲಿ ಆಗಿಲ್ಲ. ಸಾಲದ ಪ್ರಯೋಜನವನ್ನೆಲ್ಲಾ ಉಚ್ಚ ಆದಾಯದ ವರ್ಗಗಳು ಈಗಾಗಲೇ ಪಡೆದಿವೆ ಆದರೆ ಸಾಲ–ಮರುಪಾವತಿಯ ಭಾರ ಬೀಳುವುದು ಸಾಮಾನ್ಯದುಡಿಯುವ ಜನರ ಮೇಲೆ ಅದೂ ಈ ಸಾಲದಿಂದಒಂದು ಪೈಸಾದ ಪ್ರಯೋಜನ ಪಡೆಯದವರ ಮೇಲೆ. ದೇಶ ಸಾಲದ ಸುಳಿಯಲ್ಲಿ ಹೆಚ್ಚೆಚ್ಚು ಮುಳುಗಿದಂತೆ ಜನತೆ ಇದರಲ್ಲಿ ನಜ್ಜುಗುಜ್ಜಾಗುತ್ತಿರುವುದು ಈಗಾಗಲೇ ಕಾಣಬರುತ್ತಿದೆ.

ಹಗರಣಗಳ ಆಗರ ಮಂಗಳೂರು ವಿ. ವಿ.

– ವಿಶ್ವ ಕುಂದಾಪುರ

ಎಂಟು ವರ್ಷಗಳ ಹಿಂದೆ ಸ್ಥಾಪನೆಯಾದ ದಕ್ಷಿಣ ಕನ್ನಡ ಮತ್ತು ಕೊಡಗು ಜಿಲ್ಲೆಗಳ ವ್ಯಾಪ್ತಿಯನ್ನು ಒಳಗೊಂಡ ಮಂಗಳೂರು ವಿಶ್ವವಿದ್ಯಾನಿಲಯ ಶಿಕ್ಷಣ ರಂಗದಲ್ಲಿ ಅಂದು ಹುಟ್ಟಿಸಿದ್ದ ನಿರೀಕ್ಷೆಗಳನ್ನೆಲ್ಲ ತಲೆ ಕೆಳಗಾಗಿಸುವಂತೆ ಇಂದು ಹಗರಣಗಳ ಆಗರವಾಗಿ ಬೆಳೆದು ನಿಂತಿದೆ. ಶಿಕ್ಷಣ ವ್ಯಾಪಾರಿಗಳ ಹಿತ ಕಾಯುವ ಸಂಸ್ಥೆಯಾಗುತ್ತಿದೆ. ಇತ್ತೀಚೆಗೆ ಬಹಿರಂಗವಾಗಿರುವ ಅನೇಕ ಪ್ರಕರಣಗಳು ಇದಕ್ಕೆ ಸಾಕ್ಷಿ.

ದಕ್ಷಿಣ ಕನ್ನಡ ಜಿಲ್ಲೆಯ ಶಿಕ್ಷಣೋದ್ಯಮಿಗಳ(ಹಿಂದೂ ಹಾಗೂ ಕ್ರಿಶ್ಚನ್) ಕೈಗೊಂಬೆಯಂತೆ ಮಂಗಳೂರು ವಿ.ವಿ ಕೇಂದ್ರ ಸರ್ಕಾರದ ಯೋಜನೆಯಂತೆ ಖಾಸಗಿ ಕಾಲೇಜುಗಳಿಗೆ ಸ್ವಾಯತ್ತೆ ನೀಡುವ ತರಾತುರಿ ನಡೆಸುತ್ತಿರುವುದು ಈಗಾಗಲೇ ಸ್ಪಷ್ಟವಾದ ವಿಚಾರ. ಪ್ರಜ್ಞಾವಂತ ಅಕಾಡೆಮಿಕ್ ಕೌನ್ಸಿಲ್, ಸೆನೆಟ್ ಸದಸ್ಯರ ವಿರೋಧ ಹಾಗೂ ವಿದ್ಯಾರ್ಥಿ ಇನ್ನಿತರ ಜನವಿಭಾಗಗಳ ವ್ಯಾಪಕ ಪ್ರತಿಭಟನೆಯಿಂದ ಸ್ವಾಯತ್ತೆ ಯೋಜನೆ ತತ್ಕಾಲಕ್ಕೆ ತಡೆಹಿಡಿಯಲ್ಪಟ್ಟಿದೆಯಷ್ಟೆ.

87–88ನೇ ಶೈಕ್ಷಣಿಕ ವರ್ಷದ ಅಂತಿಮ ಬಿ.ಕಾಂ.ನ ಎರಡು ಪ್ರಶ್ನೆ ಪತ್ರಿಕೆಗಳು ವಿ.ವಿ. ವ್ಯಾಪ್ತಿಯ ಕಾರ್ಕಳದ ಭುವನೇಂದ್ರ ಕಾಲೇಜಿನಲ್ಲಿ ಪರೀಕ್ಷೆಗೆ ಮುನ್ನವೇ ಬಹಿರಂಗಗೊಂಡಿದ್ದು ಅದಕ್ಷತೆ ಹಾಗೂ ಭ್ರಷ್ಟತೆ, ಅಲ್ಲದೆ ತಮ್ಮ ಕಾಲೇಜು ಉತ್ತಮ ಫಲಿತಾಂಶ ತರುವಂಥದ್ದೆಂದು ತೋರಿಸಿ ವಿದ್ಯಾರ್ಥಿಗಳನ್ನು ಆಕರ್ಷಿಸುವ (ಡೋನೇಶನ್‌ಗಾಗಿ) ಖಾಸಗಿ ಆಡಳಿತ ವರ್ಗಗಳ ತಂತ್ರವನ್ನಿಲ್ಲಿ ಕಾಣಬಹುದು. ಈ ಪ್ರಕರಣದಲ್ಲಿ, ವಿ.ವಿ. ಪರೀಕ್ಷಾ ಮಂಡಳಿಯ ಅಧ್ಯಕ್ಷರಾಗಿರುವವರು ಹಾಗೂ ವ್ಯಾಲ್ಯುಯೇಶನ್ ಸ್ಕೀಮ್ ತಯಾರಿಸಿದವರಿಬ್ಬರೂ ಸದರಿ ಕಾಲೇಜಿನಲ್ಲಿ ಅಧ್ಯಾಪಕರಾಗಿರುವುದರಿಂದ ತಪ್ಪಿತಸ್ಥರು ಯಾರೆಂದು ತಿಳಿಯುವುದು ಕಷ್ಟದ ವಿಷಯವಾಗುಳಿದಿಲ್ಲ. ಪ್ರಶ್ನೆ

(6ನೇ ಪುಟ ನೋಡಿ)

ಕರ್ನಾಟಕ ಶಾಂತಿ ಸೌಹಾರ್ದತಾ ಸಮಿತಿಯ ಸಭೆ ಕರೆ

ಜನ ಸಮುದಾಯದೆಡೆಗೆ ಶಾಂತಿ ಸಂದೇಶ

ಕರ್ನಾಟಕ ಶಾಂತಿ ಮತ್ತು ಸೌಹಾರ್ದತಾ ಸಂಘಟನೆಯ ರಾಜ್ಯ ಮಂಡಳಿಯ ವಿಸ್ತೃತ ಸಭೆಯು ದಿ.18.6.1988 ರಂದು ಬೆಂಗಳೂರಿನಲ್ಲಿ ಜರುಗಿತು. ಪ್ರೊ|| ಎಂ.ಎ. ಸೇತುರಾವ್ ಸಭೆಯ ಅಧ್ಯಕ್ಷತೆ ವಹಿಸಿದ್ದರು. ರಾಜ್ಯ ಕಾರ್ಯದರ್ಶಿಗಳಾದ ಕಾಂ. ಎಸ್.ಆರ್.ಆರಾಧ್ಯ ಮತ್ತು ಕಾಂ. ಸುರೇಂದ್ರರವರು ಕ್ರಮವಾಗಿ ರಾಷ್ಟ್ರೀಯ ಮಂಡಳಿ ಸಭೆಯ ವರದಿ ಹಾಗೂ ರಾಜ್ಯ ಮಂಡಳಿಯ ವಾರ್ಷಿಕ ವರದಿಯನ್ನು ಮಂಡಿಸಿದರು. ವಿಜ್ಞಾನಿಗಳ ವೇದಿಕೆಯ ಪರವಾಗಿ ಡಾ|| ಸಂಜಯ್ ಬಿಸ್ವಾಸ್ ಮಾತನಾಡಿದರು. ಅಧ್ಯಕ್ಷೀಯ ಮಂಡಳಿಯ ಸದಸ್ಯರಲ್ಲೊಬ್ಬರಾದ ಕಾಂ. ಪಿ. ರಾಮಚಂದ್ರರಾವ್ ಸಹ ವೇದಿಕೆಯ ಮೇಲೆ ಉಪಸ್ಥಿತರಿದ್ದರು. ವರದಿಯ ಮೇಲೆ ಪ್ರಸ್ತಾಪವಿಕವಾಗಿ ಚರ್ಚೆ ಪ್ರಾರಂಭಿಸುತ್ತಾ ಉಪಧ್ಯಕ್ಷರಲ್ಲೊಬ್ಬರಾದ ಕಾಂ. ಎಸ್. ಸೂರ್ಯನಾರಾಯಣರಾವ್ ರವರು ಮಾತನಾಡುತ್ತಾ ಜಾಗತಿಕ ಶಾಂತಿ ಚಳುವಳಿಯ ಒತ್ತಡ ಮತ್ತು ಸಮಾಜವಾದಿ ಸೋವಿಯೆತ್ ಒಕ್ಕೂಟದ ಸತತ ಪ್ರಯತ್ನದ ಫಲವಾಗಿ INF ಒಪ್ಪಂದ ಬೆಳವಣಿಗೆಯಾಗಿದೆ. ಆದರೆ ಇದರಿಂದ ಸಾಮ್ರಾಜ್ಯಶಾಹಿಯ ಯುದ್ಧದಾಹ ತೀರಿದೆಯೆಂದಾಗಲೀ ಅಥವಾ ಹೃದಯ ಪರಿವರ್ತನೆಯಾಗಿದೆಯೆಂದಾಗಲೀ ಭಾವಿಸದೇ ಶಾಂತಿ ಚಳುವಳಿಯನ್ನು ಮುಂದೆ ಕೊಂಡೊಯ್ಯಬೇಕಾಗಿದೆ ಎಂದು ತಿಳಿಸಿದರು. ದಕ್ಷಿಣ ಆಫ್ರಿಕಾದಲ್ಲಿ ನಡೆಯುತ್ತಿರುವ ಅಮಾನುಷ ಜನಾಂಗೀಯ ದಬ್ಬಾಳಿಕೆಯನ್ನು ತಡೆಗಟ್ಟಲು ಸಿದ್ಧವಿಲ್ಲದ ಅಧ್ಯಕ್ಷ ರೇಗನ್ ಸೋವಿಯೆತ್ ಒಕ್ಕೂಟದಲ್ಲಿ ಮಾನವೀಯ ಹಕ್ಕುಗಳ ಬಗ್ಗೆ ಮಾತನಾಡುವುದು ವಿಪರ್ಯಾಸವಾಗಿದೆಯೆಂದು ಟೀಕಿಸಿದರು.

ಕೋಲಾರ, ಬಳ್ಳಾರಿ, ಗುಲ್ಬರ್ಗಾ, ಶಿವಮೊಗ್ಗ, ಮತ್ತು ಬೆಂಗಳೂರು ಜಿಲ್ಲೆಗಳಿಂದ ಹಾಗೂ ವಿವಿಧ ಸಾಮೂಹಿಕ ಸಂಘಟನೆಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ನೆಲ್ಸನ್ ಮಾಂಡೆಲಾ ಬಿಡುಗಡೆಗೆ ಒತ್ತಾಯಿಸುವ ವಿಶೇಷ ನಿರ್ಣಯವೂ ಸೇರಿದಂತೆ ಹಲವಾರು ನಿರ್ಣಯಗಳನ್ನು ಸಭೆಯು ಅಂಗೀಕರಿಸಿದೆ.

ಸಂಘಟನಾ ನಿರ್ಣಯ

ರಾಜ್ಯ ಮಂಡಳಿಯು ಕನಿಷ್ಟ 3-4 ತಿಂಗಳಿಗೊಮ್ಮೆ ಸಭೆ ಸೇರಬೇಕೆಂದು ಮತ್ತು ಘಟನೆಗಳನ್ನು ಕ್ರಿಯಾಶೀಲಗೊಳಿಸಿ ಹೊಸಘಟಕಗಳನ್ನು ರಚಿಸಬೇಕೆಂದು ಹಾಗೂ ಜಿಲ್ಲಾ ಸಮ್ಮೇಳನಗಳನ್ನು ನಡೆಸಬೇಕೆಂದು ತೀರ್ಮಾನಿಸಲಾಗಿದೆ. ಸಮಾನ ಧೋರಣೆಯ ಇತರೇ ರಾಜಕೀಯ ಪಕ್ಷಗಳು ಹಾಗೂ ಸಾಮೂಹಿಕ ಸಂಘಟನೆಗಳನ್ನು ಸಂಪರ್ಕಿಸಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಪ್ರಯತ್ನಿಸಬೇಕೆಂದು ನಿರ್ಧರಿಸಲಾಗಿದೆ.

ಮುಂದಿನ ಕಾರ್ಯಕ್ರಮಗಳು

ಜುಲೈ 18 ನೆಲ್ಸನ್ ಮಾಂಡೆಲಾ ಬಿಡುಗಡೆ ದಿನಾಚರಣೆ, ಆಗಸ್ಟ 6 ಹಿರೋಷಿಮಾ ದಿನಾಚರಣೆ, ಸೆಪ್ಟಂಬರ್ 1 ವಿಶ್ವಶಾಂತಿ ದಿನಾಚರಣೆ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಯಶಸ್ವಿಗೊಳಿಸಲು ಕರೆ ನೀಡಲಾಗಿದೆ. ಈ ಸಂದರ್ಭದಲ್ಲಿ ವಿಚಾರ ಗೋಷ್ಠಿಗಳು, ಸಾಂಸ್ಕೃತಿಕ ಚಟುವಟಿಕೆ, ಶಾಂತಿ ಜಾಥಾಗಳಂತಹ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸೂಚಿಸಲಾಗಿದೆ.

ಉಪನ್ಯಾಸ ಕಾರ್ಯಕ್ರಮಗಳು

ರಾಜ್ಯ ಮಂಡಳಿ ಸಭೆಯ ಅಂಗವಾಗಿ ಐ.ಎನ್ ಎಫ್ ಒಪ್ಪಂದ ಹಾಗೂ ಮಾಸ್ಕೋ ಶೃಂಗ ಸಭೆಯ ಕುರಿತು ಉಪನ್ಯಾಸ ಕಾರ್ಯಕ್ರಮವೊಂದನ್ನು ಸಹ ಏರ್ಪಡಿಸಲಾಗಿತ್ತು. ಕಾರ್ಯಕ್ರಮದಲ್ಲಿ ಡಾ|| ಹೆಚ್. ರಾಮಚಂದ್ರನ್, ಪಿ.ರಾಮಚಂದ್ರರಾವ್, ಪ್ರೊ|| ಡಿ.ಎಲ್. ರಾಮನಾಥನ್ ರವರುಗಳು ಮಾತನಾಡಿ ಒಪ್ಪಂದದ ಮಹತ್ವವನ್ನು ವಿವರಿಸಿದರು.

ಕಾ|| ಎನ್. ಎಲ್. ಸಹಾಯ ನಿಧಿಗೆ ನೆರವು

ಬೆಂಗಳೂರಿನಲ್ಲಿ ಜಿಲ್ಲಾ ಹೋಟೆಲ್ ಕಾರ್ಮಿಕ ಸಂಘದ ನಾಯಕರು ಹಾಗೂ ಸಂಗಾತಿಗಳು ಕಾ|| ಎನ್. ಎಲ್. ಉಪಾಧ್ಯಯರ ಆರೋಗ್ಯ ನಿಧಿಗೆ ನೀಡಿದ ನೆರವಿನ ವಿವರವನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ.

ಕಾ|| ಇ.ಕೆ.ಎನ್. ರಾಜನ್ (ಸಂಘದ ಪ್ರ. ಕಾರ್ಯದರ್ಶಿ)	50-00
ಸಂಘದ ವತಿಯಿಂದ	100-00
ಕಾ|| ಎ. ಆರ್. ಅಡವೀಸ್ (ಉಪಾಧ್ಯಕ್ಷರು)	100=00
ಕಾ|| ಮಾಧವನ್	100-00
ಕಾ|| ಅಯ್ಯಪ್ಪನ್	50-00
ಕಾ|| ಬಾಲನ್	25-00
ಕಾ|| ಮ್ಯಾಥ್ಯೂ	25-00
ಕಾ|| ಬೃಹಸ್ಪತಿ	25-00
ಕಾ|| ಅಪ್ಪು	20-00
ಕಾ|| ಉಮ್ಮರ್	20-00
ಕಾ|| ಅಬ್ದುಲ್ ಕರೀಂ	20-00
ಒಟ್ಟು ರೂ.	530-00

ರೈತ ಸಂಘದ ಹೋರಾಟಗಳು

ಚಿಂತಾಮಣಿ

ಬಕ್ಕರ್ ಹುಕ್ಕುಂ ಭೂಮಿಯಲ್ಲಿ ಉಳುಮೆ ಮಾಡುವ ರೈತರಿಗೆ ಭೂಮಿಯ ಹಕ್ಕನ್ನು ಖಾಯಂಗೊಳಿಸಲು ಒತ್ತಾಯಪಡಿಸಿ 15-6-88 ರಂದು ಚಿಂತಾಮಣಿ ತಾಲ್ಲೋಕಿನಲ್ಲಿ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ಸಂಗ್ರಹವಾದ 4 ಸಾವಿರ ಅರ್ಜಿಗಳನ್ನು ತಹಶೀಲ್ದಾರರಿಗೆ ಅರ್ಪಿಸಲಾಗಿದೆ.

ನಂತರ ನಡೆದ ಸಭೆಯನ್ನುದ್ದೇಶಿಸಿ ಮಾತನಾಡಿದ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಜಿ.ವಿ. ಅಶ್ವಥನಾರಾಯಣರೆಡ್ಡಿ ಮತ್ತು ಚಿಂತಾಮಣಿ ತಾಲ್ಲೂಕು ಅಧ್ಯಕ್ಷರಾದ ರಾಮಚಂದ್ರೇಗೌಡರು ಸರಕಾರದ ಅಲಕ್ಷ್ಯ ನೀತಿಯನ್ನು ಖಂಡಿಸಿ ಉಗ್ರ ಹೋರಾಟಕ್ಕೆ ರೈತರಿಗ ಕರೆ ನೀಡಿದರು.

ವಿದ್ಯುತ್ತಿಗಾಗಿ ರೈತರ ಧರಣಿ

20-6-88 ರಂದು ರಾಯಚೂರು ಜಿಲ್ಲೆಯ ಕುಷ್ಟಗಿ ತಾಲೋಕಿನ ವಜ್ಜಲ ಬಂಡಿ ಪ್ರಾಂತ್ಯದ ಕರ್ನಾಟಕ ಪ್ರಾಂತ್ಯ ರೈತ ಸಂಘದ ಸಮಿತಿ ಆಶ್ರಯದಲ್ಲಿ ಕೆ.ಇ.ಬಿ. ಇಲಾಖೆಯ ದುರಾಡಳಿತ ಹಾಗೂ ವಿದ್ಯುತ್ಚ್ಛಕ್ತಿ ಸಮಯಕ್ಕೆ ಸರಿಯಾಗಿ ಒದಗಿಸದಿರುವುದನ್ನು ಪ್ರತಿಭಟಿಸಿ ಕೆ.ಇ.ಬಿ. ಕಛೇರಿ ಮುಂದೆ ಧರಣಿ ನಡೆಸಿದರು. 300 ರೈತರು ನಗರದ ಮುಖ್ಯ ರಸ್ತೆಗಳಲ್ಲಿ ಮೆರವಣಿಗೆ ನಡೆಸಿ ಧರಣಿ ಸ್ಥಳಕ್ಕೆ ಬಂದರು ಬೇಡಿಕೆ ಈಡೇರಿಕೆಗೆ ಅಧಿಕಾರಿಗಳು ಭರವಸೆ ನೀಡಿರುತ್ತಾರೆ.

ತೋರಣಗಲ್ಲು

ಬಳ್ಳಾರಿ ಜಿಲ್ಲೆ ತೋರಣಗಲ್ಲು ಹೋಬಳಿ ವ್ಯಾಪ್ತಿಯ ಲಿಂಗದಳ್ಳಿ ರಾಜಾಪುರ, ಹುಬ್ಬಲಗುಡಿ ಹಾಗೂ ತೋರಣಗಲ್ಲಿನ ನೂರಾರು ರೈತರು ಮೇ 30 ರಂದು ಸಂಡೂರಿನ ತಾಲೋಕು ಕಛೇರಿಗೆ ಮೆರವಣಿಗೆಯಲ್ಲಿ ಬಂದು 1978 ರಿಂದ ಸಿ ಮತ್ತು ಡಿ ವರ್ಗದ ಭೂಮಿ ಸಾಗುವಳಿ ಮಾಡಿಕೊಂಡು ಬರುತ್ತಿರುವ ಅರಣ್ಯ ಭೂಮಿಯನ್ನು ಕಂದಾಯ ಇಲಾಖೆಗೆ ವರ್ಗಾವಣೆ ಮಾಡಿ ಕೊಡಬೇಕೆಂದು ಒತ್ತಾಯಿಸಿ ತಹಸೀಲ್ದಾರ್‌ರವರಿಗೆ ಮನವಿ ಪತ್ರ ಅರ್ಪಿಸಲಾಯಿತು. ಈ ಮೆರವಣಿಗೆಯ ನೇತೃತ್ವವನ್ನು ಸಂಚಾಲಕ ಎನ್. ಶಂಕ್ರಣ್ಣ ಹಾಗೂ ಸಹ ಸಂಚಾಲಕ ಯು. ತಿಪ್ಪೆಸ್ವಾಮಿಯವರು ವಹಿಸಿದ್ದರು.

ಬಂಟ್ವಾಳ

ಹತ್ತಾರು ವರ್ಷಗಳಿಂದ ಸರಕಾರಿ ಭೂಮಿಯನ್ನು ಆಗಮೆ ಮಾಡಿ ಮನೆ ಕಟ್ಟಿ ವಾಸವಿದ್ದ ಸಹಸ್ರಾರು ಬಡ ಕೃಷಿ ಕೂಲಿಗಾರರಿಗೆ ನಿವೇಶನ ಸಕ್ರಮಗೊಳಿಸಿ ಹಕ್ಕು ಪತ್ರ ನೀಡಬೇಕೆಂದು ಹಾಗೂ ದರ್ಖಾಸ್ತು ಪರಿಶೀಲನಾ ಸಮಿತಿಯಲ್ಲಿ ರೈತ ಸಂಘದ ನಾಯಕರಿಗೆ ಪ್ರಾತಿನಿಧ್ಯ ನೀಡಬೇಕೆಂದು ಮುಖ್ಯಮಂತ್ರಿಗಳನ್ನು ಒತ್ತಾಯಿಸಿ ತಹಸೀಲ್ದಾರರಿಗೆ ಜೂನ್ 6 ರಂದು ಮನವಿ ಪತ್ರ ಸಲ್ಲಿಸಲಾಯಿತು.

ನಂತರ ಸಭೆಯನ್ನುದ್ದೇಶಿಸಿ ರೈತ ಸಂಘದ ಬಂಟ್ವಾಳ ತಾಲೋಕು ಸಮಿತಿ ಅಧ್ಯಕ್ಷ ಕಾ ವಾಸುಗಟ್ಟಿಯವರು ಮಾತನಾಡಿದರು.

ಪಡಿತರ ಅಕ್ಕಿ ಕಡಿತಕ್ಕೆ ವಿರೋಧ

ಪಡಿತರ ಅಕ್ಕಿ ಪೂರೈಕೆಯ ಪ್ರಮಾಣದಲ್ಲಿ ಕಡಿತಗೊಳಿಸಿದ ರಾಜ್ಯ ಸರ್ಕಾರದ ನೀತಿಯನ್ನು ಬಂಟ್ವಾಳ ತಾಲೋಕು ಸಿ. ಪಿ. ಐ. (ಎಂ) ಸಮಿತಿ ಖಂಡಿಸಿದೆ. ಕಾ. ವಾಸುಗಟ್ಟಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಅಕ್ಕಿ ಹಾಗೂ ಇತರೆ ಆಹಾರ ಸಾಮಗ್ರಿಗಳ ಬೆಲೆಯು ವಿಪರೀತ ಏರುತ್ತಿರುವುದನ್ನು ಖಂಡಿಸಿದೆ.

ಸಾಂಪ್ಲರ್ ಬಾಯ್ಸ್‌ಗಳ ಹೋರಾಟಕ್ಕೆ ಜಯ

ಬಳ್ಳಾರಿ ಜಿಲ್ಲೆ ಹೊಸಪೇಟೆಯಲ್ಲಿರುವ ಟಿ. ಸಿ. ಆರ್. ಕಾರ್ಪೋರೇಷನ್ ಮತ್ತು ಇತಾಲಾಬ್ ಪ್ರೈವೇಟ್ ಇಂಡಸ್ಟ್ರೀಸ್‌ಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದ ಕಾ|| ಚಂದ್ರಪ್ಪ ಮತ್ತು ಕಾ|| ಬಂಡೆಪ್ಪ ಇವರುಗಳನ್ನು ಅಕ್ರಮವಾಗಿ ಕೆಲಸದಿಂದ ವಜಾ ಮಾಡಿರುವುದನ್ನು ಖಂಡಿಸಿ ಹೊಸಪೇಟೆ, ಪಾಪಿನಾಯಕನ ಹಳ್ಳಿ, ತೋರಣಗಲ್ಲು, ಬಳ್ಳಾರಿ, ಕಾರಿಗನೂರು ಶಾಖೆಗಳಲ್ಲಿ ಮೇ 10 ರಂದು ಕೆಲಸ ಸ್ಥಗಿತಗೊಳಿಸಿ ಮಿಂಚಿನ ಮುಷ್ಕರ ನಡೆಸಲಾಯಿತು. ಕನಿಷ್ಟ ಕೂಲಿಯ ಜಾರಿ ಮತ್ತಿತರ ಬೇಡಿಕೆಗಳಿಗಾಗಿ ಹಲವಾರು ಬಾರಿ ಹೋರಾಟ ನಡೆಸಿರುವ ಸಿ. ಐ. ಟಿ. ಯು. ನೇತೃತ್ವದ ಈ ಸಂಘವನ್ನು ಒಡೆಯಲು ಆಡಳಿತ ವರ್ಗ ಸಾಂಪ್ಲರ್ಸ್ ಮತ್ತು ಅಸಿಸ್ಟೆಂಟ್ ಸಾಂಪ್ಲರ್ಸ್ ನಡುವೆ ಒಡಕನ್ನುಂಟು ಮಾಡಲು ಪ್ರಯತ್ನಿಸಿದ್ದನು ಕಾರ್ಮಿಕರು ಐಕ್ಯತೆಯಿಂದ ಎದುರಿಸಿ ಹೋರಾಟ ನಡೆಸುತ್ತಿದ್ದಾರೆ.

ಎಲ್ಲಾ ಶಾಖೆಗಳಲ್ಲೂ ಒಂದೇ ಬಾರಿಗೆ ಹೋರಾಟ ಕಂಡ ಆಡಳಿತ ವರ್ಗ ಎದುರಿ ಮಾತುಕತೆ ನಡೆಸಿ ವಜಾ ಮಾಡಲ್ಪಟ್ಟ ಸಂಗಾತಿಗಳನ್ನು ಕೆಲಸಕ್ಕೆ ಪಡೆಯಲಾಯಿತು. ಈ ಹೋರಾಟದ ನೇತೃತ್ವವನ್ನು ಕಾ. ಸುಂದರ್ ಕಾ. ರಾಮಚಂದ್ರ ರವರುಗಳು ಹಾಗೂ ತೋರಣಗಲ್ಲಿನ ಪಕ್ಷ, ರೈತ ಸಂಘ ಹಾಗೂ ಡಿ. ವೈ. ಎಫ್. ಐ. ಸಂಗಾತಿಗಳು ಭಾಗವಹಿಸಿ ಸಕ್ರಿಯ ಬೆಂಬಲ ನೀಡಿದರು.

ಹರಿಹರ ಸಿ.ಐ.ಟಿ.ಯು. ಸ್ಥಾಪನಾ ದಿನಾಚರಣೆ

"ಜಾತಿ ಧರ್ಮ, ಬಣ್ಣ, ಭಾಷೆಗಳ ಭಿನ್ನತೆಯ ಭಾವಗಳು ಒಳ ಪ್ರವೇಶಿಸದಂತೆ ತಡೆದು ಕಾರ್ಮಿಕ ಸಂಘಗಳನ್ನು ವರ್ಗ ರಾಜಕೀಯದ ಪಾಠಶಾಲೆಗಳಾಗಿ ಕಟ್ಟಿ ಬೆಳಸಬೇಕು..." ಎಂದು ಸಿ. ಐ. ಟಿ. ಯು ಅಧ್ಯಕ್ಷರಾದ ಎಸ್. ಸೂರ್ಯನಾರಾಯಣರಾವ್ ಕರೆ ನೀಡಿದ್ದಾರೆ. ಅವರು 30-5-88 ರಂದು ಸಿ.ಐ ಟಿ.ಯು. ಸ್ಥಾಪನಾ ದಿನಾಚರಣೆಯ ಅಂಗವಾಗಿ ಹಾಗೆ 'ದಲ್ಲಿ ಏರ್ಪಡಿಸಲಾಗಿದ್ದ ಬಹಿರಂಗ ಸಭೆಯನ್ನುದ್ದೇಶಿಸಿ ಅವರು ಮಾತನಾಡುತ್ತಿದ್ದರು.

ಕೆ ಜಿ. ಎಫ್. ಮಹಿಳಾ ಸಂಘಟನೆ ಹಾಗು ಡಿ. ವೈ. ಎಫ್. ಐ. ಜಂಟೀ ಹೋರಾಟ

ಸ್ಥಳೀಯ ಬಿ.ಇ.ಎಂ. ಎಲ್. ನಗರಕ್ಕೆ ಹೊಂದಿಕೊಂಡಿರುವ ಪ್ರದೇಶಗಳ ಸುಮಾರು 600 ಕುಟುಂಬಗಳು ಬಿ. ಇ.ಎಂ. ಎಲ್ ಗ್ರಾಹಕರ ಸರ್ವರಿ ಸಂಘದಲ್ಲಿ ಪಡೆಯುತ್ತಿದ್ದು ಇದೀಗ ಧಿಡೀರನೆ ಜಿಲ್ಲಾಧಿಕಾರಿಗಳು ಈ ಸೌಲಭ್ಯವನ್ನು ರದ್ದುಪಡಿಸಿ 6 ಕಿ. ಮೀ. ದೂರದ ಪ್ರದೇಶಕ್ಕೆ ನ್ಯಾಯಬೆಲೆ ಅಂಗಡಿಯನ್ನು ವರ್ಗಾಯಿಸಿ ಪ್ರದೇಶದ ಜನರನ್ನು ಸಂಕಷ್ಟಕ್ಕೆ ಈಡು ಮಾಡಿದ್ದಾರೆ. ಸುಮಾರು ಎರಡು ದಶಕಗಳಿಂದ ನಾಗರಿಕರು ಅನುಭವಿಸುತ್ತಿದ್ದ ಸೌಲಭ್ಯವನ್ನು ರದ್ದುಪಡಿಸುವುದರ ವಿರುದ್ಧ ಸ್ಥಳೀಯ ಡಿ ವೈ. ಎಫ್. ಐ ಹಾಗು ಎ ಐ ಡಿ. ಡಬ್ಲ್ಯೂ. ಎ. ಸಂಘಟನೆಗಳು ಜಂಟಿಯಾಗಿ ಸಹಿ ಸಂಗ್ರಹಿಸಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿವೆ. ಮುಂದಿನ ಹೋರಾಟಕ್ಕೆ ಸಿದ್ಧರಾಗುತ್ತಿದ್ದಾರೆ.

○

ತ್ರಿಪುರಾದಲ್ಲಿ ಕಾಂಗ್ರೆಸ್‌ನ ಬರ್ಬರ ಹಿಂಸಾಕಾಂಡ

ಎಸ್. ಗುಡಿಗೆ

ಹೇಯ ಕೃತ್ಯಗಳ ಸರಪಳಿಯನ್ನೇ ಹೆಣೆದು ತ್ರಿಪುರಾದಲ್ಲಿ ಕಾಂಗ್ರೆಸ್ ಅಧಿಕಾರದ ಗದ್ದುಗೆ ಏರಿ ಕುಳಿತಿದೆ.

ಪ್ರಜಾಸತ್ತಾತ್ಮಕ ವಿಧಾನಗಳು ತಮಗೆ ಸೋಲನ್ನು ಮಾತ್ರ ತರುವುದೆಂಬ ಖಚಿತ ತಿಳುವಳಿಕೆಯಿಂದ ಉಂಟಾದ ಭಯದಿಂದ ಹಿಂಸಾಚಾರಕ್ಕಿಳಿದಿದ್ದಾರೆ ಕಾಂಗ್ರೆಸ್‌ನ ರಣಹದ್ದುಗಳು. ಮತದಾನಕ್ಕೆ ಕೇವಲ ಮೂರೇ ದಿನಗಳಿರುವಾಗ ಎಡರಂಗ ಸರಕಾರದ ಅಭಿಪ್ರಾಯಗಳಿಗೆ ಬೆಲೆ ನೀಡದೆ, ಕೇಂದ್ರ ಸರಕಾರ ತ್ರಿಪುರಾವನ್ನು ಗಲಭೆ ಪೀಡಿತ ಪ್ರದೇಶವೆಂದು ಘೋಷಣೆ ಮಾಡಿ ಸೈನ್ಯವನ್ನು ಅಲ್ಲಿಗೆ ಕಳುಹಿಸಿ ಚುನಾವಣೆಯಲ್ಲಿ ಅಕ್ರಮಗಳನ್ನೂ ನಡೆಸಿದ್ದು ಈಗ ಬಯಲಾಗಿ ಹೋಗಿದೆ. ಕಾಂಗ್ರೆಸ್ ಎಡರಂಗದಿಂದ ಅಧಿಕಾರ ಕಸಿದುಕೊಂಡ ಪ್ರಸಂಗ ಪೂರ್ತಿಯಾಗಿ ಪೂರ್ವಯೋಜಿತವಾದದ್ದೆಂಬುದರಲ್ಲಿ ಈಗ ಯಾವುದೇ ಸಂಶಯ ಉಳಿದಿಲ್ಲ. ಸುಧಾರಿಸಿಕೊಳ್ಳಲಾಗದಂತಹ ಹೊಡೆತವನ್ನು ಪಶ್ಚಿಮ ಬಂಗಾಳದ ಚುನಾವಣೆಯಲ್ಲಿ ತಿಂದ ಕಾಂಗ್ರೆಸ್ ಕಂಗಲಾಗಿ ಹೋಗಿತ್ತು. ನ್ಯಾಯಯುತ ಕ್ರಮಗಳಿಂದ ತ್ರಿಪುರಾದಲ್ಲಿ ಚುನಾವಣೆ ಗೆದ್ದೇನೆಂಬ ನಂಬಿಕೆ ಲವಲೇಶವೂ ಕಾಂಗ್ರೆಸ್‌ನವರಿಗೆ ಇರಲಿಲ್ಲ. ತನ್ನ ಕೃತ್ಯಗಳ ಫಲದಿಂದಲೇ ಹೆಣೆದುಕೊಂಡ ಸಮಸ್ಯೆಗಳ ಜಾಲದಲ್ಲಿ ಒದ್ದಾಡುತ್ತಿದ್ದ ಕಾಂಗ್ರೆಸ್‌ಗೆ ತ್ರಿಪುರಾದಲ್ಲಿ ಹೇಗಾದರೂ ಗೆಲ್ಲಲೇಬೇಕಾಗಿತ್ತು. ಆದ್ದರಿಂದ ಮತಗಟ್ಟೆ ವಶಪಡಿಸಿಕೊಳ್ಳುವಿಕೆ, ಗಲಭೆ, ದೊಂಬಿ, ಮೋಸ, ಇತ್ಯಾದಿ ಯಾವ ಕೃತ್ಯಗಳಿಗೂ ಹೇಸಲಿಲ್ಲ.

ಅಧಿಕಾರಕ್ಕೆ ಬರುತ್ತಲೇ ಕಾಂಗ್ರೆಸ್ ಪ್ರಜಾಸತ್ತಾತ್ಮಕ ಸಂಸ್ಥೆಗಳ ಚುನಾಯಿತ ಆಡಳಿತ ವರ್ಗವನ್ನು ಕಿತ್ತೆಸೆದು ತನಗೆ ಬೇಕಾದವರ ನೇಮಕ ಮಾಡಿಕೊಂಡಿತು. ಸೈನ್ಯ ಮತ್ತು ಪ್ಯಾರ ಮಿಲಿಟರಿ ಕಾಂಗ್ರೆಸ್‌ನ ಅಡಿಯಾಳಾಯಿತು. ಕಾಂಗ್ರೆಸ್‌ನ ಕೃತ್ಯಗಳಿಗೆ ಸೈನ್ಯ ಆಯುಧವಾಯಿತು. ಚುನಾವಣೆಯ ಮುಖವಾಡದಲ್ಲಿ ದಮನಕಾರಕ ವ್ಯವಸ್ಥೆಯ ಸ್ಥಾಪನೆಯಾಯಿತು.

ಕಾಂಗ್ರೆಸ್ ಮುಖಿದ ಮದ್ದಾನೆಯಂತೆ ಮನಬಂದಂತೆ ಸ್ವೇಚ್ಛಾಚಾರಕ್ಕೆ ಇಳಿದಿದೆ. ಹಿಂಸಾಚಾರ ತಾಂಡವವಾಡುತ್ತಿದೆ. ಕಾಂಗ್ರೆಸ್‌ನ ದುಷ್ಟ ಕೃತ್ಯಗಳಿಗೆ ಬಲಿಯಾಗುತ್ತಿರುವವರು ಯಾರು? ಸಿ ಪಿ ಐ(ಎಂ) ಮತ್ತು ಅದರ ಬೆಂಬಲಿಗರು, ಭಾರತ ವಿದ್ಯಾರ್ಥಿ ಫೆಡರೇಷನ್, ಪ್ರಜಾಸತ್ತಾತ್ಮಕ ಯುವಕ ಫೆಡರೇಷನ್, ಕಿಸಾನ್ ಸಭಾ ಮುಂತಾದ ಸಾಮೂಹಿಕ ಸಂಘಟನೆಗಳು ಕಾಂಗ್ರೆಸ್‌ನ ಗುರಿ.

ತ್ರಿಪುರಾದಲ್ಲೇ ಏಕೆ? ಸಿಪಿಐ(ಎಂ) ಪಕ್ಷವೇ ಏಕೆ?

ಕಾಂಗ್ರೆಸ್ ತನ್ನ ಹಿಂಸಾಕಾಂಡಕ್ಕೆ ತ್ರಿಪುರಾವನ್ನೇ ಆರಿಸಿಕೊಂಡಿರುವುದು ಏಕೆ? ಸಿ ಪಿ ಐ (ಎಂ) ಮತ್ತು ಅದರ ಬೆಂಬಲಿಗರೇ ಕಾಂಗ್ರೆಸ್‌ಗೆ ತನ್ನ ಮುಖ್ಯ ಶತ್ರುಗಳಾಗಿ ಕಾಣಿಸುತ್ತಿರುವುದೇಕೆ?

ತ್ರಿಪುರಾದಲ್ಲಿ ಕಳೆದ ಹತ್ತು ವರ್ಷಗಳಿಂದಲೂ ಎಡರಂಗ ಸಿಪಿಐ(ಎಂ)ನ ನೇತೃತ್ವದಲ್ಲಿ ಅಧಿಕಾರದಲ್ಲಿತ್ತು. ಕಾಂಗ್ರೆಸ್‌ನ ದುಷ್ಕೃತ್ಯಗಳಿಗೆ ಅವಕಾಶವೇ ಇರಲಿಲ್ಲ. ಸಿಪಿಐ(ಎಂ) ಕಾಂಗ್ರೆಸ್‌ಗೆ ರಾಷ್ಟ್ರ ಮಟ್ಟದಲ್ಲೂ ತಲೆನೋವು ತಂದಿರುವ ಪಕ್ಷ. ಸೈದ್ಧಾಂತಿಕವಾಗಿ ಸ್ಪಷ್ಟತೆ ಹೊಂದಿದ್ದು ಜನತೆಯ ಹಿತಕ್ಕಾಗಿ ಸತತವಾಗಿ ಹೋರಾಡುತ್ತ ಬಂದಿರುವ ಪಕ್ಷ ಸಿ ಪಿ ಐ ಎಂ. ಎಡ ಮತ್ತು ಜಾತ್ಯಾತೀತ ಪಕ್ಷಗಳ ಒಗ್ಗಟ್ಟಿಗಾಗಿಯೇ ದುಡಿಯುತ್ತ ಬಂದಿದೆ. ಸಿಪಿಐ (ಎಂ)ನ ಜನಪರ ಕೆಲಸಗಳು ಕಾಂಗ್ರೆಸ್‌ಗೆ ಹೊಡೆತ ಕೊಟ್ಟಿವೆ. ತ್ರಿಪುರದಲ್ಲಿ ಅಕ್ರಮಗಳಿಂದ ಅಧಿಕಾರಕ್ಕೆ ಕಾಂಗ್ರೆಸ್ ಅಲ್ಲಿ ಸಿಪಿಐ(ಎಂ) ಅನ್ನು ತನ್ನ ಹಿಂಸಾಚಾರಕ್ಕೆ ಗುರಿ ಮಾಡಿಕೊಂಡಿದ್ದರ ಆಶ್ಚರ್ಯವೇನು? ಸಿಪಿಐ(ಎಂ)ನ ದಮನಕ್ಕಾಗಿ ದೇಶ ದ್ರೋಹಿಯೆಂದು ತಾನೇ ಖಂಡಿಸುತ್ತಿದ್ದ ಟಿ ಎನ್.ವಿಯ ಜೊತೆಗೂ ಕಾಂಗ್ರೆಸ್ ಈಗ ಶಾಮೀಲಾಗಿದೆ. ತನ್ನ ಸ್ವೇಚ್ಛಾಚಾರಗಳಿಗೆ ಅಡ್ಡಿಯಾಗಿ ನಿಂತಿರುವ ಸಿಪಿಐ (ಎಂ) ಅನ್ನು ಮುಗಿಸಲು ಯಾವುದೇ ಕೃತ್ಯಕ್ಕೂ ಹೇಸುವುದಿಲ್ಲವೆಂಬುದನ್ನು ಅಲ್ಲಿಯ ಕಾಂಗ್ರೆಸ್ ಗೃಹಮಂತ್ರಿ ಸಮೀರ್ ರಂಜನ್ ಬರ್ಮನ್ ಘೋಷಿಸಿದ್ದಾರೆ. (ಬಾಕ್ಸ್ ನೋಡಿ) ಯಾರೇ ಮತ ನೀಡದಿದ್ದರೂ ಚುನಾವಣೆಗಳನ್ನು ಗೆಲ್ಲಲು ತನಗೆ ಗೊತ್ತೆಂದು ಮುಖ್ಯಮಂತ್ರಿಗಳೇ ಹೇಳಿದ್ದಾರೆ.

ಕಾಂಗ್ರೆಸ್ ಆಡಳಿತ ಪ್ರಾರಂಭವಾದ ದಿನದಿಂದ ತ್ರಿಪುರಾ ಹೇಗಿದೆ? ಅದು ಒಂದು ಆಕ್ರಮಿತ ಪ್ರದೇಶದಂತಿದೆ. ಮಿಲಿಟರಿ ಮತ್ತು ಪ್ಯಾರ ಮಿಲಿಟರಿ ಆಡಳಿತದ ಕೆಳಗೆ ನಲುಗುತ್ತಿರುವ ತ್ರಿಪುರ ಸಮಾಜ ಘಾತುಕರ ಸ್ವರ್ಗವಾಗಿದೆ. ಚುನಾವಣೆಗಳಲ್ಲಿ ಸಿ ಪಿ ಎಂ ಪಕ್ಷಕ್ಕೆ ಮತ ನೀಡಿದ ಬಹು ದೊಡ್ಡ ಜನ ಸಮೂಹ ತನ್ನ ಎಲ್ಲ ಹಕ್ಕುಗಳನ್ನು ಕಳೆದುಕೊಂಡಿದೆ. ತಮ್ಮ ನೆಲದಲ್ಲೇ ಇವರು ಪರಕೀಯರಾಗಿದ್ದಾರೆ. ವಿದೇಶಿಯರು ನಮ್ಮ ಕ್ಷೇತ್ರವನ್ನು ಆಕ್ರಮಿಸಿಕೊಂಡರೆ ಎಂತಹ ಪರಿಸ್ಥಿತಿ ಉಂಟಾಗಿತೋ ಅಂತಹ ಪರಿಸ್ಥಿತಿ ಇಂದು ತ್ರಿಪುರದಲ್ಲಿದೆ. ಜೀವ ಮತ್ತು ಆಸ್ತಿಗೆ ಅಪಾಯದ ಸತತ ಬೆದರಿಕೆ ಇದ್ದೇ ಇದೆ. ಯಾವ ಪೊಲೀಸ್ ಸ್ಟೇಷನ್ನೂ ಜನರಿಗೆ ರಕ್ಷಣೆ ನೀಡಲಾರದು. ಯಾವ ಕೋರ್ಟ್ ಸಹ ಜನಕ್ಕೆ ರಕ್ಷಣೆ ನೀಡುವ ಸ್ಥಿತಿಯಿಲ್ಲ. ರಾಜ್ಯದ ಗೃಹಮಂತ್ರಿ ಸಬ್ ಜ್ಯೂಡಿಷಿಯಲ್ ಮೆಜಿಸ್ಟ್ರೇಟ್ ಅವರನ್ನು ತಾವಿದ್ದಲ್ಲಿಗೇ ಕರೆಸಿಕೊಂಡು, ತಾವೇ ನೀಡಿದ ಆಜ್ಞೆಯನ್ನು ತಿರುವು ಮುರುವು ಮಾಡುವಂತೆ ಒತ್ತಡ ಹೇರಿದ ಘಟನೆಯೊಂದು ಬೆಳಕಿಗೆ ಬಂದಿದೆ. ಕಾನೂನು ಮತ್ತು ಶಿಸ್ತು ಆಡಳಿತ ನಡೆಸುತ್ತಿರುವ ಪುಂಡರ ವಶವಾಗಿ ಹೋಗಿವೆ. ಬೂರ್ಜ್ವಾ ಪ್ರಜಾಸತ್ತೆ ಬೆನ್ನು ಮುರಿದುಕೊಂಡು ಬಿದ್ದಿದೆ. ಜನ ತಮ್ಮ ಮೂಲಭೂತ ಹಕ್ಕುಗಳನ್ನು ಹೋರಾಟಗಳಿಂದ ಪುನಃ ಗೆದ್ದುಕೊಳ್ಳಬೇಕಾದಂತಹ ಪರಿಸ್ಥಿತಿ ತ್ರಿಪುರಾಕ್ಕೆ ಒದಗಿದೆ.

ತ್ರಿಪುರಾದ ಮಾಜಿ ಮುಖ್ಯಮಂತ್ರಿ ಕಾ. ನೃಪೇನ್ ಚಕ್ರವರ್ತಿ ರಾಷ್ಟ್ರಪತಿಗೆ ಬರೆದ ಪತ್ರದಲ್ಲಿ ಈ ಪರಿಸ್ಥಿತಿಯ ಕಡೆಗೆ ಅವರ ಗಮನ ಸೆಳೆದಿದ್ದಾರೆ. ಕಾಂಗ್ರೆಸ್ (ಐ)ನ ಆಡಳಿತದಲ್ಲಿರುವ ಇಂದಿನ ತ್ರಿಪುರಾದ ಪರಿಸ್ಥಿತಿ ತುರ್ತು ಪರಿಸ್ಥಿತಿಯಲ್ಲಿದ್ದುದಕ್ಕಿಂತ ಕೆಟ್ಟದಾಗಿದೆ ಯಾಕೆಂದರೆ ತುರ್ತು ಪರಿಸ್ಥಿತಿಯ ಕಾಲದಲ್ಲಿ ಜನ ರಕ್ಷಣೆಗಾಗಿ ಕೋರ್ಟುಗಳಿಗಾದರೂ ಹೋಗಬಹುದಾಗಿತ್ತು. ಇಂದು ಅದೂ ಫಲಪ್ರದವಾಗಲಾರದು. ಪ್ಯಾರಾ ಮಿಲಿಟರಿಯ ಆಡಳಿತದಲ್ಲಿರುವ ತ್ರಿಪುರದಲ್ಲಿ ಜನ ರಕ್ಷಣೆಗಾಗಿ ಯಾರನ್ನೂ ಆಶ್ರಯಿಸುವಂತಿಲ್ಲ ಎಂದು ವಿವರಿಸಿದ್ದಾರೆ.

ಕಾ. ನೃಪೇನ್ ಚಕ್ರವರ್ತಿ ತಮ್ಮ ಪತ್ರ ಮುಂದುವರೆಸುತ್ತ ಹಿಂಸಾಚಾರಗಳನ್ನು ವಿವರಿಸಿದ್ದಾರೆ.

ದೇಶ ಪ್ರೇಮಿಗಳ ಶಕ್ತಿ ಎಂಬ ಗೌರವಕ್ಕೆ ಪಾತ್ರವಾಗಿದ್ದ ನಮ್ಮ ಸೇನೆಯ ವಿಭಾಗಗಳನ್ನು ಇಂದು ಆಡಳಿತದಲ್ಲಿರುವ ಪಕ್ಷ ತನ್ನ ಸಂಕುಚಿತ ಹಿತಾಸಕ್ತಿಗಳಿಗಾಗಿ ಉಪಯೋಗಿಸುತ್ತಿದೆ. ಸೇನೆಯ ಅತ್ಯಾಚಾರ ಮತ್ತು ಅಮಾನುಷ ಕೃತ್ಯಗಳ ಬಗೆಗೆ ಹಲವು ಕಡೆಗಳಿಂದ ವರದಿಗಳು ಬರುತ್ತಲಿವೆ. ಬುಡಕಟ್ಟು ಜನಗಳು ಸಾಂದ್ರವಾಗಿರುವ ಪ್ರದೇಶಗಲ್ಲಿ ಜನ ಅತಿ ಹೆಚ್ಚಿನ ಹಿಂಸೆಗೆ ಒಳಗಾಗುತ್ತಿದ್ದಾರೆ. ಸುಬ್ರೂಮ್‌ನಲ್ಲಿ ನಡೆದ ಮಹಿಳೆಯರ ಮೇಲಿನ ಅತ್ಯಾಚಾರದ ಬಗ್ಗೆ ತ್ರಿಪುರಾದ ವಿಧಾನ ಸಭೆಯಲ್ಲಿ ವರದಿ ನೀಡಲಾಗಿದೆ. ಸುಬ್ರೂಮ್‌ನ ಸಿಪಿಎಂನ ಜಿಲ್ಲಾ ಸಮಿತಿಯ ಸದಸ್ಯರಾದ ಕಾ. ಮಲೋಯ್ ದಿವಾನ್ ಅವರನ್ನು ಪೊಲೀಸ್ ವಶದಲ್ಲಿರುವಾಗಲೇ ಅಮಾನುಷ ಹಿಂಸೆಗೆ ಗುರಿಪಡಿಸಲಾಯಿತು.

ತ್ರಿಪುರಾ ಬುಡಕಟ್ಟು ಪ್ರದೇಶಗಳಲ್ಲಿ ಜಿಲ್ಲಾ ಸ್ವಾಯತ್ತ ಸಮಿತಿಗಳನ್ನು (ಅಂದರೆ ಆಟೋನೊಮಸ್ ಡಿಸ್ಟ್ರಿಕ್ಟ್ ಕೌನ್ಸಿಲ್ ಎಡಿಸಿ) ಒಡೆಯುವ ಪ್ರಯತ್ನ ನಡೆದಿದೆ. ವಿವಿಧ ಸೇವೆಗಳಲ್ಲಿ ಮೀಸಲಾತಿಯನ್ನು ಕಡಿಮೆ ಮಾಡಿ ಬುಡಕಟ್ಟು ಜನಾಂಗ ಮತ್ತು ಇತರರ ನಡುವೆ ವಿಷಮತೆ ಹರಡುವುದೇ ಇದರ ಉದ್ದೇಶ.

ಕೆಲವೇ ದಿನಗಳ ಹಿಂದೆ ಸುಬ್ರೂಮ್‌ನ ಹರಿವಾದಲ್ಲಿ ಸುಜಿತ್ ಘೋಷ್ ಎಂಬ ಸಿಪಿಎಂ ಕಾರ್ಯಕರ್ತರೊಬ್ಬರನ್ನು ಅಮಾನುಷವಾಗಿ ಹಲ್ಲೆಗೊಳಪಡಿಸಿ ಕೊಲ್ಲಲಾಯಿತು. ಪೋಲಿಸರು ಕೇಡಿಗಳನ್ನು ಬಂಧಿಸುವ ಪ್ರಯತ್ನ ನಡೆಸಿದಾಗ ಕಾಂಗ್ರೆಸ್ (ಐ) ಬಂಧನದ ವಿರುದ್ಧ 'ರಾಸ್ತಾ ರೋಕೋ' ನಡೆಸಿದರು.

ಸ್ವಾತಂತ್ರ್ಯ ಹೋರಾಟಗಾರರನ್ನೂ ಬಿಡಲಿಲ್ಲ

ಮೇ 15 ರಂದು ಚೌರಿಲಾಮ್‌ನಲ್ಲಿ ನಡೆದದ್ದು ಅತ್ಯಂತ ಹೇಯವಾದ ಘಟನೆ ದುರ್ಗಾದಾಸ್ ಸಿಕ್ದರ್ ಎಂಬುವರು ಎಪ್ಪತ್ತಾರು ವರ್ಷದ ಹಣ್ಣು ಹಣ್ಣು ಮುದುಕರು. ಇವರು ಸ್ವಾತಂತ್ರ್ಯ ಹೋರಾಟಗಾರರು. ಜನತೆಗಾಗಿ ಹಗಲಿರುಳೂ ದುಡಿಯುವ ಸಿಪಿಎಂನ ಜನಾನುರಾಗಿ ನಾಯಕ. ಭಿಶ್ರಮ್‌ಗಂಜ್ ಅವರ ಕೇಂದ್ರಸ್ಥಾನ. ಆ ದಿನ ಅವರು ಚಾರಿಲಾಮ್‌ಗೆ ಚುನಾವಣೆಯ ನಂತರ ಮೊದಲ ಬಾರಿ ಹೋಗಿದ್ದರು. ಅವರು ವಾಪಸ್ ಬರಲು ಬಸ್ ಏರುತ್ತಿರುವಾಗ ಕಾಂಗ್ರೆಸ್‌ನ ಪುಂಡರು ಅವರನ್ನು ಥಳಿಸತೊಡಗಿದರು ಅವರನ್ನು ಹೊರಗೆಳೆದು ಕೊಲೆಗೈಯುವುದು ಅವರ ಉದ್ದೇಶವಾಗಿರಬಹುದು. ಆದರೆ ಮೈಯಲ್ಲಿ ರಕ್ತಮಯವಾಗಿದ್ದ ಸಿಕ್ದರ್ ಅವರನ್ನು ಬಸ್ಸಿನಲ್ಲಿದ್ದ ಸಹ ಪ್ರಯಾಣಿಕರು ಉಳಿಸಿದರು.

ಬುಡಕಟ್ಟು ಜನಾಂಗಗಳಿಲ್ಲದ ಕಡೆಗೆ ಕಾಂಗ್ರೆಸ್ (ಐ)ನ ಭಯೋತ್ಪಾದನೆ ಇದ್ದರೆ, ಬುಡಕಟ್ಟು ಜನಾಂಗಗಳಿರುವ ಪ್ರದೇಶಗಳಲ್ಲಿ ಟಿ. ಎನ್. ವಿ. ಈ ಕೆಲಸ ಮಾಡುತ್ತಿದೆ. ಒಂದು ಕಾಲದಲ್ಲಿ ಟಿ ಎನ್. ವಿ ಸಿಪಿಎಂನ ಕೂಸು ಎಂದು ಟೀಕಿಸುತ್ತಿದ್ದ ಕಾಂಗ್ರೆಸ್ಸಿಗರು ಈಗ ಅವರೊಡನೆ ಶಾಮೀಲಾಗಿದ್ದಾರೆ. ಖೊವೈ ಉಪ ವಿಭಾಗವೊಂದರಲ್ಲೇ ಪ್ರತ್ಯೇಕತಾವಾದಿಗಳಿಂದ ಶಿಕ್ಷಕರು ಮತ್ತು ಬುಡಕಟ್ಟು ನಾಯಕರುಗಳಿಂದ ಲಕ್ಷಗಟ್ಟಲೆ ರೂಪಾಯಿಗಳನ್ನು ಬಲಾತ್ಕಾರದಿಂದ ಸಂಗ್ರಹಿಸಲಾಗಿದೆ.

ಇವು ಕೆಲವು ಘಟನೆಗಳು ಮಾತ್ರ ತ್ರಿಪುರದಲ್ಲಿ ದಿನ ನಿತ್ಯ ಇಂತಹ ಸಾವಿರ ಸಾವಿರ ಘಟನೆಗಳು ನಡೆಯುತ್ತಿವೆ. ನಿಷ್ಠಾವಂತ ಕಾರ್ಯಕರ್ತರು ಇದಕ್ಕೆ ನಾನಾ ರೂಪದಲ್ಲಿ ಬೆಲೆ ತರುತ್ತಿದ್ದಾರೆ.

ತ್ರಿಪುರಾದಲ್ಲಿಯ ಭಯೋತ್ಪಾದನೆ ಪಶ್ಚಿಮ ಬಂಗಾಳದಲ್ಲಿಯ ಗೆರಿಲ್ಲಾ ಯುದ್ಧದ ಬಗೆಗಿನ ಮಾತು ಬಾಂಬು ಮತ್ತು ಇತರ ಭಯಂಕರ ಅಸ್ತ್ರಗಳ ಬಳಕೆ ಇವೆಲ್ಲದಕ್ಕೂ ಒಂದು ಹಿನ್ನೆಲೆಯಿದೆ. ಇವು ಪೂರ್ವಯೋಜಿತವೂ ಹೌದು ಇವುಗಳ ಉದ್ದೇಶ ಎಡಪಕ್ಷಗಳ ನೇತೃತ್ವದಲ್ಲಿ ವಿಶಾಲ ತಳಹದಿಯ ಮೇಲೆ ಬೆಳೆಯಬಹುದಾದ ಚಳುವಳಿಯನ್ನು ಹತ್ತಿಕ್ಕುವುದು.

(5ನೇ ಪುಟ ನೋಡಿ)

ಸೈನ್ಯದ ಅಮಾನುಷ ಕೃತ್ಯಗಳು

ಕೆಳಗೆ ಉಲ್ಲೇಖಿಸಿರುವ ಕೆಲವೇ ಕೆಲವು ಘಟನೆಗಳು ತ್ರಿಪುರಾದಲ್ಲಿ ಟಿಎನ್‌ವಿ ಪ್ರಣೀತ ಗಲಭೆಯನ್ನು ಹತ್ತಿಕ್ಕುವ ಮಹತ್ಕಾರ್ಯದ ನೆಪದಲ್ಲಿ ಬೀಡುಬಿಟ್ಟಿರುವ ಸೈನ್ಯ ನಡೆಸಿರುವ ಅಮಾನುಷ ಕೃತ್ಯಗಳ ಕಲ್ಪನೆಯನ್ನು ನೀಡುತ್ತದೆ. ಸೈನ್ಯ ಟಿಎನ್‌ವಿಯ ಹತೋಟಿಗಾಗಿ ಇದೆಯೋ ಅಥವಾ ಜನರನ್ನೂ ದಮನಗೊಳಿಸುವ ಉದ್ದೇಶ ಹೊಂದಿದೆಯೋ ಎಂಬುದನ್ನೂ ಇದರಿಂದ ನಿರ್ಧರಿಸಬಹುದು.

ಏಪ್ರಿಲ್ ತಿಂಗಳಿನಲ್ಲಿ ಕಮಲಾಪುರ ಉಪವಿಭಾಗದಲ್ಲಿ ಅಸ್ಸಾಮ್ ರೈಫಲ್ಸ್‌ನ ಸೈನಿಕರು ಅಮೃತಾದೇವವರ್ಮಾ ಅವರ ಮನೆಗೆ ಹೋದರು. ದೇವವರ್ಮ ಮನೆಯಲ್ಲಿರಲಿಲ್ಲ ಹದಿಮೂರು ಜನ ಈ ಯೋಧರು (!) ಒಬ್ಬರಾದ ಮೇಲೆ ಒಬ್ಬರಂತೆ ದೇವವರ್ಮರ ಹೆಂಡತಿಯ ಮೇಲೆ ಅತ್ಯಾಚಾರ ನಡೆಸಿದರು.

ಇದೇ ಉಪವಿಭಾಗದಲ್ಲಿ ಇದೇ ಅಸ್ಸಾಂ ರೈಫಲ್ಸ್‌ನ ಜನಜ್ಯೋತಿ ಮರ್ಯಿ ದೇವವರ್ಮರನ್ನೂ ಹಿಡಿದು ಕಟ್ಟಿಹಾಕಿದರು. ಅಡಿಗೆ ಮನೆಯಲ್ಲಿ ಅಡಿಗೆ ಮಾಡುತ್ತಿದ್ದ ಅವರ ಹೆಂಡತಿಯನ್ನು ಹಿಡಿದೆಳೆದು ಅತ್ಯಾಚಾರ ನಡೆಸಿದರು.

ಕ) ಬುಡಕಟ್ಟು ಜನಾಂಗದ 10, 11 ವರ್ಷಗಳ ಇಬ್ಬರು ಬಾಲೆಯರ ಮೇಲೆ ಈ ಪಿಶಾಚಿಗಳು ಅತ್ಯಾಚಾರ ನಡೆಸಿದರು. ಅಲ್ಲಿಗೆ ತೃಪ್ತರಾಗದೆ ಈ ಬಾಲೆಯರ ದೇಹವನ್ನೆಲ್ಲ ಕಚ್ಚಿ ಕಚ್ಚಿ ಗಾಯಗೊಳಿಸಿದರು. ಪ್ರಜ್ಞಾಶೂನ್ಯರಾದ ಬಾಲಕಿಯರನ್ನು ರಕ್ತದ ಮಡುವಿನಲ್ಲಿ ಅಡವಿಯಲ್ಲೆಸೆದು ಹೋದರು.

ಡ) ಮಲಿರೋಜಾಪುರಕ್ಕೆ ಅಸ್ತ್ರಗಳ ಶೋಧನೆಗಾಗಿ ಜವಾನರು ಹೋದರು. ಆ ಹಳ್ಳಿಯ 70 ರಿಂದ 80 ಮಹಿಳೆಯರನ್ನು ಸಾಲಾಗಿ ನಿಲ್ಲಿಸಿ ಅವರನ್ನು ಬೆತ್ತಲೆಗೊಳಿಸಿದರು. ಇದೇ ಸ್ಥಿತಿಯಲ್ಲಿ ಅವರನ್ನು ಬೆಳಗ್ಗೆ 7 ಗಂಟೆಯಿಂದ ಸಾಯಂಕಾಲ 3 ಗಂಟೆಯವರೆಗೆ ನಿಲ್ಲುವಂತೆ ಮಾಡಿದರು.

ಇ) ರೈಪಾಸಾದಲ್ಲಿ ಒಬ್ಬ ಬಂಗಾಲಿ ಬಾಲಕಿಯನ್ನು ಸೈನಿಕರು ಆಕೆಯ ವೃದ್ಧ ತಂದೆಯ ಎದುರೇ ಮಾನಭಂಗಗೊಳಿಸಿದರು.

ಕಾ||ಇ. ಎಂ. ಎಸ್. ರವರೊಡನೆ ಪ್ರಶ್ನೋತ್ತರ

ಸರ್ಕಾರದಲ್ಲಿ ಭಾಗವಹಿಸುವುದು ಸೈದ್ಧಾಂತಿಕ ಪ್ರಶ್ನೆಯಲ್ಲ

ಉತ್ತರ :

ರಾಜಕೀಯ ಮೈತ್ರಿ ಅಥವಾ ರಂಗವನ್ನು ರಚಿಸುವುದರಲ್ಲಿ ಮಾರ್ಕ್ಸ್‌ವಾದಿ ಲೆನಿನ್‌ವಾದಿಗಳೂ ಹಾಗೂ ಬೂರ್ಶ್ವಾ ರಾಜಕಾರಣಿಗಳ ನಡುವೆ ಹಲವು ವ್ಯತ್ಯಾಸಗಳಿವೆ. ಕಾರ್ಮಿಕರು, ರೈತರ ಸಮುದಾಯದ ಸಂಘಟಿತ ಚಳವಳಿ ಹಾಗೂ ಹೋರಾಟಗಳನ್ನು ಬೆಳೆಸಿ ಆದರಿಂದ ಅವರ ತಿಳುವಳಿಕೆಯನ್ನು ಹೆಚ್ಚಿಸುವುದು ಅವರನ್ನು ಒಂದು ಸಂಘಟಿತ ರಾಜಕೀಯ ಶಕ್ತಿಯಾಗಿ ಪರಿವರ್ತಿಸುವುದು ಇದೇ ಮಾರ್ಕ್ಸ್‌ವಾದಿ ಲೆನಿನ್‌ವಾದಗಳ ಕಣ್ಣೋಟ. ಈ ಕರ್ತವ್ಯವನ್ನು ನೆರವೇರಿಸುವುದರಲ್ಲಿ ಚುನಾವಣೆಯನ್ನೂ ಉಪಯೋಗಿಸಬಹುದು. ಮೇಲೆ ಹೇಳಿದ ಕೆಲಸವನ್ನೂ ಚೆನ್ನಾಗಿ ಮಾಡಿದರೆ ಅದರ ಪರಿಣಾಮವನ್ನು ಈ ಚುನಾವಣೆಯಲ್ಲಿಯೂ ಕಾಣಬಹುದು. ಅದ್ದರಿಂದ ಚುನಾವಣೆಯಲ್ಲಿ ವಿಜಯಕ್ಕಾಗಿ ಕೆಲಸ ಮಾಡುವಾಗಲೇ ಜನಸಮುದಾಯದ ಹೋರಾಟಗಳಿಗೆ ಮಾರ್ಕ್ಸ್‌ವಾದಿ ಲೆನಿನ್‌ವಾದಿಗಳು ಮುಂದೆ ನಿಲ್ಲುತ್ತಾರೆ.

ತಮ್ಮ ಅಭಿಲಾಷೆಯಷ್ಟು ಸ್ಥಾನಗಳು ಸಿಗಲಿಲ್ಲವೆಂದಾದರೆ ಅವರು ತಮಗೆ ಬೇಕಾದವರನ್ನು ಸೇರಿಸಿ ಗುಂಪು ಕಟ್ಟುವುದಕ್ಕೂ, ಅವಕಾಶವಾದರೆ ಮತ್ತೊಂದು ಪಕ್ಷ ಕಟ್ಟುವುದಕ್ಕೂ ಹೇಸುವುದಿಲ್ಲ. ಆದ್ದರಿಂದ ಇಂತಹ ಸಮಸ್ಯೆಗಳನ್ನು ಬಗೆ ಹರಿಸಿಕೊಳ್ಳುವುದಕ್ಕೆ ಬೂರ್ಶ್ವಾ ರಾಜಕಾರಣಿಗಳು ತಮ್ಮ ಪಕ್ಷದಲ್ಲಿರುವ ಗುಂಪುಗಳು ಮತ್ತು ವ್ಯಕ್ತಿಗಳನ್ನು ಮೈತ್ರಿ ರಂಗದ ಪಕ್ಷಗಳನ್ನು ಸಂತುಷ್ಟಗೊಳಿಸುವುದು ಮುಖ್ಯವಾದ ಪಕ್ಷಕ್ಕೆ ಅನಿವಾರ್ಯವಾಗುತ್ತದೆ. ಈ ಪ್ರಯತ್ನ ವಿಫಲವಾದರೆ ಅವರ ಮಂತ್ರಿಮಂಡಲದಲ್ಲಿ ಸಮಸ್ಯೆಗಳು ಉದ್ಭವವಾಗುತ್ತವೆ. ಪಕ್ಷವೇ ಒಡೆಯುತ್ತದೆ. ಇ.ೀ 40 ವರ್ಷಗಳ ಕಾಲ ಭಾರತದಲ್ಲಿ ನಡೆದು ಬಂದಿರುವ ಪಕ್ಷಾಂತರ ರಾಜಕೀಯದ ತಾಯಿಬೇರು. ಅದನ್ನು ನಿವಾರಿಸಲು ಆಡಳಿತ ಪಕ್ಷ ಮತ್ತು ಭೂರ್ಶ್ವಾ ಪಕ್ಷಗಳು ಹೇಳುವ ಕ್ರಮವೆಂದರೆ ಪಕ್ಷಾಂತರ ನಿಷೇಧ ಕಾನೂನು. ಆದರೆ ಈ ರೋಗವನ್ನು ಕಾನೂನುಗಳಿಂದ ಗುಣಪಡಿಸುವುದು ಸಾಧ್ಯವಿಲ್ಲವೆಂದು ಕೆಲವೇ ಸಮಯದಲ್ಲಿ ತಿಳಿಯುತ್ತದೆ.

ಮೊದಲೇ ಪಕ್ಷ ಅಧಿಕಾರದಲ್ಲಿ ಭಾಗವಹಿಸುವುದಿಲ್ಲವೆಂದು ಸಾರಿ ಹೇಳಿತು. ಈ ನಿಲುವನ್ನು ತೆಗೆದುಕೊಳ್ಳಲು ಮಾರ್ಕ್ಸ್‌ವಾದಿ ಪಕ್ಷವನ್ನು ಪ್ರೇರೇಪಿಸಿದ್ದು ಕಾರ್ಮಿಕ ವರ್ಗದ ಕ್ರಾಂತಿಕಾರಿ ದೃಷ್ಟಿಕೋನ. ಎಂಗೆಲ್ಸ್‌ರವರು ತಮ್ಮ ಕೊನೆಯ ದಿನಗಳಲ್ಲಿ ಇಟಲಿಯ ಸಂಗಾತಿಗಳಿಗೆ ಇಂತಹದೇ ಒಂದು ಪ್ರಶ್ನೆ ಉದ್ಭವವಾದಾಗ ಕೊಟ್ಟ ಮಾರ್ಗದರ್ಶನ ಈ ರೀತಿ ಇದೆ. ಹೊಸ ಸರಕಾರದಲ್ಲಿ ಅಲ್ಪ ಸಂಖ್ಯಾತರಾಗಿ ಭಾಗವಹಿಸಿದರೆ ಈ ಸರಕಾರದಲ್ಲಿ ನೀತಿಗೆ ಬದ್ಧವಾದ ತೀರ್ಮಾನ ತೆಗೆದುಕೊಳ್ಳಲು ನಿಮಗೆ ಸಾಧ್ಯವಾಗದು. ಆ ಸರ್ಕಾರ ಮಾಡುವ ತಪ್ಪುಗಳ ಭಾರ ಮಾತ್ರ ನಿಮ್ಮ ಮೇಲೆ ಬೀಳುತ್ತವೆ. ಆದ್ದರಿಂದ ಮುಂದೆ ಬರುವ ಸಮಸ್ಯೆಗಳನ್ನು ಪರಿಶೀಲಿಸಿ ಒಂದು ತೀರ್ಮಾನವನ್ನು ತೆಗೆದುಕೊಳ್ಳುವುದೇ ಒಳ್ಳೆಯದೆಂದು ಅವರು ಸಲಹೆ ಮಾಡಿದ್ದರು.

ಇಲ್ಲಿ ಎರಡು ಪ್ರಶ್ನೆಗಳು ಏಳುತ್ತವೆ ಒಂದನೆಯದು ಜನ ಸಮುದಾಯದ ಕ್ರಾಂತಿಕಾರಿ ಚಳುವಳಿಯನ್ನು

ಪ್ರಶ್ನೆ :

ಮುಂಬರುವ ಲೋಕಸಭಾ ಚುನಾವಣೆಗಳಲ್ಲಿ ಅಖಿಲ ಭಾರತ ಮಟ್ಟದಲ್ಲಿ ಬೆಳೆಯುತ್ತಿರುವ ಎಡರಂಗ ಹಾಗೂ ಇದರೊಡನೆ ಸಹಕರಿಸಲು ಸಿದ್ಧವಿರುವ ಜಾತ್ಯತೀತ ಪ್ರಜಾಸತ್ತಾತ್ಮಕ ಪಕ್ಷಗಳ ರಂಗಕ್ಕೆ ಪ್ರಾಮುಖ್ಯತೆ ದೊರಕಿದರೆ ನಾವು ಭಾರತದ ಆಡಳಿತದಲ್ಲಿ ನಡೆಸಬಹುದಲ್ಲವೇ ? ಆಗ ನಮ್ಮ ಧೋರಣೆಗಳಿಗನುಗುಣವಾಗಿ ಆಡಳಿತ ನಡೆಸಲು ಸಾಧ್ಯವೇ ?

ಬೂರ್ಶ್ವಾ ರಾಜಕಾರಣಿಗಳು ಮೈತ್ರಿಯ ರಾಜಕಾರಣದ ಕೇಂದ್ರವಾಗಿ ಕಾಣುವುದು ಚುನಾವಣೆಯೊಂದನ್ನೇ. ಚುನಾವಣಾ ರಂಗದಲ್ಲಿ ಜಯಗಳಿಸಲು ಜನ ಸಮುದಾಯ ಚಳುವಳಿ ಹಾಗೂ ಹೋರಾಟಗಳು ಸಹಾಯಕ ಎನ್ನುವುದರಿಂದಲೇ ಅವರು ಈ ಹೋರಾಟಗಳಲ್ಲಿ ಭಾಗವಹಿಸುವುದು. ಅಂದರೆ ಚುನಾವಣೆಗಳಲ್ಲಿ ಗೆಲ್ಲುವುದಕ್ಕೆ ಮಾತ್ರವೇ ಹೋರಾಟದಲ್ಲಿ ಚಳುವಳಿಯಲ್ಲಿ ಭಾಗವಹಿಸುವುದು.

ಪ್ರಶ್ನೆಕಾರ ಹೇಳುವಂತೆಯೇ ಅಥವಾ ಬೇರೆ ಯಾವ ರೀತಿಯಲ್ಲಿ ಚುನಾವಣೆಯಲ್ಲಿ ಗೆದ್ದರೂ ಅದರಿಂದ ಉದ್ಭವವಾಗುವ ಪರಿಸ್ಥಿತಿಯನ್ನು ಎದುರಿಸುವಾಗ ಈ ಮೇಲೆ ಹೇಳಿದ ವ್ಯತ್ಯಾಸಗಳು ಪ್ರಕಟವಾಗುತ್ತವೆ.

ಚುನಾವಣೆಯಲ್ಲಿ ಗೆದ್ದ ತಕ್ಷಣವೇ ಅದಕ್ಕೆ ಕಾರಣರಾದ ಎಲ್ಲಾ ಪಕ್ಷಗಳೂ ಹಾಗೂ ಸಂಘಟನೆಗಳನ್ನೂ ಸೇರಿಸಿಕೊಂಡು ಆಡಳಿತ ನಡೆಸಲು ಬೂರ್ಶ್ವಾ ರಾಜಕೀಯ ಪಕ್ಷಗಳು ಯಾವತ್ತು ತಯಾರಾಗುತ್ತವೆ. ಆದರಲ್ಲಿ ನಮಗೆಷ್ಟು ನಿಮಗೆಷ್ಟು ಮಂತ್ರಿ ಸ್ಥಾನಗಳು ಎಂದು ಚೌಕಾಶಿ ನಡೆಸುವುದು ಅವರು ಯಾವಾಗಲೂ ಮಾಡುವ ಕೆಲಸ.

ಮಾರ್ಕ್ಸ್‌ವಾದಿ ಲೆನಿನ್‌ವಾದಿಗಳು ಈ ದಾರಿಯಲ್ಲಿ ಹೋಗುವುದಿಲ್ಲ. ಯಾವುದೇ ಚುನಾವಣೆಯಲ್ಲಿ ವಿಜಯಕ್ಕಾಗಿ ನಾವು ಸಹಾಯ ಮಾಡಿದರೂ ಅದೊಂದೇ ಕಾರಣಕ್ಕಾಗಿ ಆಡಳಿತದಲ್ಲಿ ಭಾಗವನ್ನು ಕೇಳುವುದಿಲ್ಲ. ನಾವು ಬೇಡದೆ ಅವರೇ ಕರೆದು ಕೊಟ್ಟರೂ ಕೂಡ ಹಲವು ಸಮಯದಲ್ಲಿ ಸ್ಥಾನವನ್ನು ಕೊಡ ಬಂದುದಕ್ಕೆ ವಂದಿಸಿ ಈ ಕೊಡುಗೆಯನ್ನು ತಿರಸ್ಕರಿಸುತ್ತೇವೆ. ಇದೇ ಕಾರಣಕ್ಕಾಗಿ 1978 ರಲ್ಲಿ ಅಸ್ಸಾಂ, ಮಹಾರಾಷ್ಟ್ರಗಳ ಕಾಂಗ್ರೇಸ್ಸೇತರ ಸರಕಾರಗಳು ನೀಡಿದ ಆಹ್ವಾನವನ್ನೂ ಮಾರ್ಕ್ಸ್‌ವಾದಿ ಪಕ್ಷ ನಿರಾಕರಿಸಿತು.

ಅದಕ್ಕೆ 10 ವರ್ಷ ಮೊದಲು 1967 ರಲ್ಲಿ ಉತ್ತರ ಭಾರತದ ಹಲವು ರಾಜ್ಯಗಳಲ್ಲಿ ಕಾಂಗ್ರೆಸ್ಸೇತರ ಸರ್ಕಾರಗಳು ಆಡಳಿತಕ್ಕೆ ಬರಲು ಸಕ್ರಿಯವಾಗಿ ಸಹಾಯ ಮಾಡಿದರೂ ಸರ್ಕಾರದಲ್ಲಿ ಸೇರಲು ಕೊಟ್ಟ ಆಹ್ವಾನವನ್ನು ಪಕ್ಷ ತಿರಸ್ಕರಿಸಿತು

ಇಂದಿರಾಗಾಂಧಿಯವರು ಹೇರಿದ ತುರ್ತು ಪರಿಸ್ಥಿತಿಗೆದುರಾಗಿ 1977 ರಲ್ಲಿ ಉದ್ಭವಗೊಂಡ ಸನ್ನಿವೇಶದಲ್ಲಿ ಜನತಾ ಪಕ್ಷ ಅಧಿಕಾರಕ್ಕೆ ಬರಲು ಪಕ್ಷ ಶ್ರಮಿಸಿತು. ಆದರೆ ಚುನಾವಣೆಗೆ ಮುಂದೊಯ್ಯಲು ಅನುಕೂಲವಾಗುವ ಪರಿಸ್ಥಿತಿಯಿದ್ದರೆ ಸರ್ಕಾರದಲ್ಲಿ ಭಾಗವಹಿಸಬಹುದು (ಭಾಗವಹಿಸಬೇಕು).

ಎರಡನೆಯದು ಈ ಪರಿಸ್ಥಿತಿಯಿಲ್ಲದಿದ್ದರೆ ಸರ್ಕಾರದಲ್ಲಿ ಭಾಗವಹಿಸುವುದು ಸ್ನಾನ ಮಾಡದೆ ಒದ್ದೆ ಬಟ್ಟೆಯನ್ನು ಮೈ ಮೇಲೆ ಹರಡಿಕೊಂಡಂತೆ ಆಗುತ್ತದೆ. ಪ್ರಶ್ನೆಕರ್ತನು ಹೇಳುತ್ತಿರುವ ಲೋಕಸಭೆ ಚುನಾವಣೆ ನಡೆಯುವಾಗ ಪರಿಸ್ಥಿತಿ ಹೀಗಿರುವುದೆಂಬುದನ್ನು ಈಗ ಹೇಳುವುದು ಸಾಧ್ಯವಿಲ್ಲ. ಸರ್ಕಾರದಲ್ಲಿ ಭಾಗವಹಿಸುವುದು ಅಥವಾ ಭಾಗವಹಿಸದಿರುವುದು ಸೈದ್ಧಾಂತಿಕ ಪ್ರಶ್ನೆಯಲ್ಲ. ಅದೊಂದು ಪ್ರಾಯೋಗಿಕ ಪ್ರಶ್ನೆ.

(4ನೇ ಪುಟದಿಂದ)

ತ್ರಿಪುರೆದಲ್ಲಿನ ಬೆಳವಣಿಗೆ ತ್ರಿಪುರಾಕ್ಕೆ ಮಾತ್ರಸೀಮಿತವೆಂದು ಭಾವಿಸುವುದು ದೇಶಕ್ಕೆ ಆತ್ಮ ಘಾತುಕವಾದುದಾಂಗುತ್ತದೆ. ವಿರೋಧ ಪಕ್ಷಗಳು ತ್ರಿಪುರಾದಲ್ಲಿಯ ಬೆಳವಣಿಗೆಗಳನ್ನು ಅಲಕ್ಷಿಸುವಂತಿಲ್ಲ. ತ್ರಿಪುರಾದ ಜನರ ಹಕ್ಕುಗಳ ಸಂರಕ್ಷಣೆಗಾಗಿ ಎಲ್ಲ ಕಡೆಗಳಲ್ಲೂ ಹೋರಾಟಗಳು ನಡೆಯಬೇಕಾದ್ದು ಅತ್ಯವಶ್ಯಕ ಹಿಂಸೆಯು ಏಳಿಗಳಿಂದ ತುರ್ತುಪರಿಸ್ಥಿತಿಯ ಬಲಿ

(6ನೇ ಪುಟ ನೋಡಿ)

ಮಹಿಳೆಯರ ಮೇಲೆ ಸಾಮೂಹಿಕ ಅತ್ಯಾಚಾರ

ತ್ರಿಪುರೆದಲ್ಲಿ ಹಿಂಸಾಚಾರ ಇಂದು ಸುದ್ದಿಯಾಗುವುದಿಲ್ಲ. ಆದರೂ ಮೇ 31, ಜೂನ್ 1 ಮತ್ತು 2 ರಂದು ಖೊವಾಯ್ ಎಂಬ ಪಟ್ಟಣದಿಂದ 15 ಕಿ. ಮೀ. ದೂರವಿರುವ ಉಜನ್ ಮೈದಾನ್‌ನಲ್ಲಿ ಅಸ್ಸಾಂ ರೈಫಲ್ಸ್‌ನ ಜವಾನರೂ ಸುಮಾರು 25 ಆದಿವಾಸಿ ಮಹಿಳೆಯರ, ಬಾಲಕಿಯರ ಮೇಲೆ ನಡೆಸಿದ ಸಾಮೂಹಿಕ ಅತ್ಯಾಚಾರ ದಂಗು ಬಡಿಸುವಂತಹುದು. ಇಡೀ ದೇಶದ ಪ್ರಜಾಸತ್ತಾತ್ಮಕ ಜನತೆ ತಲೆ ತಗ್ಗಿಸುವಂತಹುದು. ಇಂತಹ ಅಮಾನುಷ ಅತ್ಯಾಚಾರಕ್ಕೆ ಒಳಗಾದ ಮಹಿಳೆಯರು ತಮ್ಮ ಕರುಣಾಜನಕ ಕಥೆಯನ್ನು ಆ ಹಳ್ಳಿಗೆ ಭೇಟಿ ಇತ್ತ ಸಿ ಪಿ ಐ (ಎಂ) ನಾಯಕರ ನಿಯೋಗವೊಂದರ ಮುಂದೆ ತೋಡಿಕೊಂಡರು.

ಎಲ್ಲರ ಕಥೆ ಒಂದೇ ಆಗಿತ್ತು. ಮನೆಗೆ ಹಲವು ಅಸ್ಸಾಂ ರೈಫಲ್ಸ್ ಜವಾನರು ನುಗ್ಗುವುದು ಮಹಿಳೆಯನ್ನು ಕಟ್ಟಿ ಹಾಕಿ ಒಬ್ಬೊಬ್ಬರಾಗಿ ಅತ್ಯಾಚಾರ ನಡೆಸುವುದು. ಕೆಲವರ ಮೇಲೆ ರಾತ್ರಿಯಲ್ಲಾದರೆ ಕೆಲವರಮೇಲೆ ಹಾಡು ಹಗಲಲ್ಲೇ. ಕೆಲವು ಕಡೆ ಗಂಡ ಅಥವಾ ತಂದೆ ಇಲ್ಲದ ಅವಕಾಶ ಉಪಯೋಗಿಸಿಕೊಂಡರೆ, ಹಲವು ಕಡೆ ಅವರನ್ನೂ ಥಳಿಸಿ ಕಟ್ಟಿ ಹಾಕಿ ಅವರ ಎದುರಲ್ಲೇ ಅತ್ಯಾಚಾರ. ಈ ಅತ್ಯಾಚಾರ ಮಹಿಳೆ ಪೂರ್ಣವಾಗಿ ಮೂರ್ಛೆ ತಪ್ಪುವವರೆಗೆ ನಡೆಯುತ್ತಿತ್ತು. ಅಸ್ಸಾಂ ರೈಫಲ್ಸ್‌ನ ಈ ಕಾಮ ಪಿಪಾಸು ಪಿಶಾಚಿಗಳು ತುಂಬು ಗರ್ಭಿಣಿಯೆಂದು ನೋಡಲಿಲ್ಲ. ಅಪ್ರಾಪ್ತ ವಯಸ್ಸಿನ 5 ನೇ ಕ್ಲಾಸಿನ ಬಾಲಕಿಯೆಂದು ನೋಡಲಿಲ್ಲ.

ಕೆಲವು ದಿನಗಳಿಂದ ಹಳ್ಳಿಯ ಶಾಲೆಯೊಂದರಲ್ಲಿ ಬೀಡು ಬಿಟ್ಟಿದ್ದ ಅಸ್ಸಾಂ ರೈಫಲ್ಸ್ ಪಡೆ ಲೂಟಿಯನ್ನು ಕೂಡಲೆ ಆರಂಭಿಸಿತ್ತು. ಮನೆಯ ಸಾಮಾನುಗಳನ್ನು, ಉರುವಲುಗಳನ್ನು ಕದ್ದೊಯ್ಯುವುದರಿಂದ ಆರಂಭವಾಗಿ, ಸಾಮೂಹಿಕ ಅತ್ಯಾಚಾರದಲ್ಲಿ ಪರ್ಯವಸಾನವಾಯಿತು. ಇವರಿಗೆ ಮನೆ ಮನೆ ನುಗ್ಗಲು ನೆಪ ಟಿ ಎನ್ ವಿ ಭಯೋತ್ಪಾದಕರನ್ನು ಹುಡುಕುವುದು.

ಸಿ ಪಿ ಐ (ಎಂ) ನಿಯೋಗ ಜೂನ್ 8 ರಂದು ಹಳ್ಳಿ ಭೇಟಿ ಕೊಟ್ಟಾಗ, ಅವರ ಕೆಲಸಕ್ಕೆ ಅಡ್ಡಿ ಮಾಡಲು ಅಸ್ಸಾಂ ರೈಫಲ್ಸ್ ಅಧಿಕಾರಿಗಳು, ಜವಾನರು ಪ್ರಯತ್ನಿಸಿದರು. ನಿಯೋಗದ ಮುಂದೆ ಸತ್ಯ ಹೇಳದಂತೆ ಮಹಿಳೆಯರನ್ನು ಬೆದರಿಸಲು ಪ್ರಯತ್ನಿಸಿದರು ಇದಕ್ಕೆ ಹೆದರದೆ 16 ಕ್ಕಿಂತಲೂ ಹೆಚ್ಚು ಮಹಿಳೆಯರು ತಮ್ಮ ಹೇಳಿಕೆ ಕೊಟ್ಟರು. ಇದೇ ರೀತಿಯ ಹೇಳಿಕೆಯನ್ನು ಆಳುವ ರಂಗದ ಟಿ.ಜೆ.ಯು.ಜೆ ಎಸ್, ಟಿ ಎಸ್ ಎಫ್ ನಿಯೋಗಗಳಿಗೂ ನೀಡಿದ್ದಾರೆ. ಆದರೆ ಸರ್ಕಾರ ಇದನ್ನು ಪ್ರಕಟಿಸಿದ ಪತ್ರಿಕೆಗಳ ಮೇಲೆ ಎನ್ ಎಸ್ ಎ ಪ್ರಕಾರ ಮೊಕದ್ದಮೆ ಹೂಡುವುದಾಗಿ ಬೆದರಿಸಿದೆ. ಸಿ ಪಿ ಐ (ಎಂ) ದಿನ ಪತ್ರಿಕೆ "ದೇಶೀಕಾ ಕಥಾ" ಅವರ ಮುಖ್ಯಗುರಿ.

ಸಿ. ಪಿ. ಐ. (ಎಂ) ನಿಯೋಗ ಸಾಮೂಹಿಕ ಅತ್ಯಾಚಾರದ ಬಗ್ಗೆ ಕರೆ ಹಾಕಿರುವ ಸಾಕ್ಷ್ಯದಿಂದ ಭಯಭೀತ ರಾಜ್ಯ ಸರ್ಕಾರ ಪ್ರಕರಣವನ್ನು ಮುಚ್ಚಿ ಹಾಕಲು ನಿವೃತ್ತ ಮ್ಯಾಜಿಸ್ಟ್ರೇಟ್‌ರ ನಾಯಕತ್ವದ ಮೂರು ಅಧಿಕಾರಿಗಳ ನಿಯೋಗವೊಂದನ್ನು ನೇಮಿಸಿದ ತ್ರಿಪುರಾ ಸಿ ಪಿ ಐ (ಎಂ) ಘಟಕ ಇದನ್ನ ತಿರಸ್ಕರಿಸಿ ಎಲ್ಲಾ ಸಾಮೂಹಿಕ ಅತ್ಯಾಚಾರಗಳ ಬಗ್ಗೆ ತನಿಖೆ ನಡೆಸಲು ಹೈಕೋರ್ಟ್ ನ್ಯಾಯಧೀಶರ ನೇತೃತ್ವದ ಸಮಿತಿ ನೀಡಬೇಕೆಂದು ಒತ್ತಾಯಿಸಿದೆ. ಅಲ್ಲದೆ ಸೈನ್ಯವನ್ನು ಹಿಂತೆಗೆದುಕೊಳ್ಳಲು ಒತ್ತಾಯಿಸಿದೆ. ಸಿ. ಪಿ. ಐ. (ಎಂ) ಪಾಲಿಟ್ ಬ್ಯೂರೋ ಪ್ರಕರಣವನ್ನು ಖಂಡಿಸಿ ನ್ಯಾಯಾಂಗ ತನಿಖೆಗೆ, ಸೈನ್ಯ ಹಿಂತೆಗೆದುಕೊಳ್ಳಲು ಒತ್ತಾಯಿಸಿದೆ.

ಸಾಮೂಹಿಕ ಅತ್ಯಾಚಾರ ಪಕ್ಷದ ಎಂ. ಪಿ. ಗಳ ಖಂಡನೆ

ಸಿಪಿಐ(ಎಂ) ನ ಎಂ ಪಿಗಳಾದ ಕನಕ ಮುಖರ್ಜಿ ಮತ್ತು ಭಿಭಾ ಘೋಷ್ ಗೋಸ್ವಾಮಿ ಕೇಂದ್ರ ಗೃಹ ಮಂತ್ರಿ ಶ್ರೀ ಬೂಟಾ ಸಿಂಗ್ ಅವರಿಗೆ ಕಳುಹಿಸಿರುವ ತಂತಿಯಲ್ಲಿ ತ್ರಿಪುರಾದ ಬುಡಕಟ್ಟು ಜನಾಂಗಗಳ ಮೇಲೆ ಪ್ಯಾರ ಮಿಲಿಟರಿಯ ಜವಾನರು ನಡೆಸಿರುವ ಅಮಾನುಷ ಹಲ್ಲೆ ಮತ್ತು ಮಹಿಳೆಯರ ಮೇಲಿನ ಸಾಮೂಹಿಕ ಅತ್ಯಾಚಾರವನ್ನು ಖಂಡಿಸಿದ್ದಾರೆ. ದೇಶವೇ ನಾಚಿಕೆಯಿಂದ ತಲೆತಗ್ಗಿಸಬೇಕಾಗಿರುವ ಪ್ರಸಂಗಗಳು ಇವು ಎಂದಿರುವ ಅವರು ಗೃಹ ಮಂತ್ರಿಯವರನ್ನು ಕೂಡಲೇ ಮಧ್ಯ ಪ್ರವೇಶಿಸಿ ವಿಚಾರಣೆ ನಡೆಸಿ ತಪ್ಪಿತಸ್ಥರನ್ನು ಶಿಕ್ಷಿಸಿ ಮುಂದೆ ಇಂತಹ ಘಟನೆಗಳು ನಡೆಯದಂತೆ ನೋಡಿಕೊಳ್ಳುವಂತೆ ಕೇಳಿಕೊಂಡಿದ್ದಾರೆ.

ಸರ್ಕಾರದಲ್ಲಿ ಭಾಗವಹಿಸುವುದು

(5ನೇ ಪುಟದಿಂದ)

ನೇಯುತ್ತಿರುವ ರಾಜೀವ್‌ಗಾಂಧಿಯ ಕರಾಳ ಯೋಜನೆಯ ಒಂದು ಭಾಗ. ತ್ರಿಪುರಾದಕ್ಷೆಯ ಜನರ ಹಕ್ಕುಗಳ ದಮನ ಕಾರ್ಯ ಎಂಬುದನ್ನು ನಾವು ಮರೆಯುವಂತಿಲ್ಲ. ಎಲ್ಲಾ ವಿರೋಧ ಪಕ್ಷಗಳು ಇದನ್ನೂ ಗ್ರಹಿಸದೇ ಹೋದರೂ ಎಡ ಪಕ್ಷಗಳು ಇದನ್ನು ಗಂಭೀರವಾಗಿ ಸ್ವೀಕರಿಸದೇ ಇರಲು ಸಾಧ್ಯವಿಲ್ಲ.

ತ್ರಿಪುರದ ಜನ ಸಿ ಪಿ ಐ (ಎಂ) ನ ನೇತೃತ್ವದಲ್ಲಿ ಹೋರಾಟಕ್ಕೆ ಸಜ್ಜಾಗುತ್ತಿದ್ದಾರೆ ಆರಂಭದ ಆಘಾತಗಳಿಂದ ಚೇತರಿಸಿಕೊಂಡ ಜನ ಕಾಂಗ್ರೆಸ್‌ನ ಹಲ್ಲೆಗೆ ದೃಢವಾದ ಪ್ರತಿರೋಧ ತೋರಿಸುತ್ತಿದ್ದಾರೆ. ಹಲ್ಲೆಗಳು ನಡೆದಲ್ಲಿ ಹಕ್ಕುಗಳ ದಮನ ನಡೆದಲ್ಲಿ, ಜನ ಸಾಮೂಹಿಕವಾಗಿ ಪ್ರತಿಭಟಿಸ ತೊಡಗಿದ್ದಾರೆ. ಹಾಗೇ ಪ್ರತಿಭಟಿಸುತ್ತಲೇ ತಮ್ಮ ಶಕ್ತಿಯನ್ನು ಕ್ರೋಢಿಕರಿಸಿಕೊಳ್ಳುತ್ತಿದ್ದಾರೆ.

ನೃಪೇನ್ ಚಕ್ರವರ್ತಿಯವರು ಮತ್ತು ಹಿಂದಿನ ಉಪ ಮುಖ್ಯಮಂತ್ರಿ ದಶರಥ ದೇಬ್ ಅವರು ಸಾಮೂಹಿಕ ಸಭೆಗಳನ್ನು ಉದ್ದೇಶಿಸಿ ಮಾತನಾಡುತ್ತಿದ್ದಾರೆ.

ಸಿ. ಪಿ ಐ. (ಎಂ) ನ ರಾಜ್ಯ ಸಮಿತಿ ಸಾಮೂಹಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಜನತೆಯ ಬೇಡಿಕೆಗಳನ್ನು ಈಡೇರಿಸುವುದು ಮತ್ತು ಭಯೋತ್ಪಾದನೆಯನ್ನು ನಿಲ್ಲಿಸುವುದು ಇವು ಕಾರ್ಯಕ್ರಮಗಳಲ್ಲಿ ಕೇಳಿ ಬರುವ ಮುಖ್ಯ ಅಂಶಗಳಾಗಿವೆ. ಮುಂಬರುವ ದಿನಗಳಲ್ಲಿ ಜನತೆಯ ಹೋರಾಟ ಹೆಚ್ಚು ಹೆಚ್ಚು ಬಲಗೊಳ್ಳಲಿದೆ.

ಘಟಿಕ್ರಾಯ್ ಕ್ಷೇತ್ರದಲ್ಲಿ ಚುನಾವಣೆ

ಘಟಿಕ್ರಾಯ್ ಕ್ಷೇತ್ರದಲ್ಲಿ ಒಬ್ಬ ಅಭ್ಯರ್ಥಿಯ ಮರಣದಿಂದಾಗಿ ಚುನಾವಣೆಯನ್ನು ಮುಂದೂಡಲಾಗಿತ್ತು. ಚುನಾವಣೆ ಏಪ್ರಿಲ್ 24 ರಂದು ನಡೆಯಿತು. ಆಗಲೇ ರಾಜ್ಯದಲ್ಲಿ ಅಧಿಕಾರದ ಗದ್ದುಗೆಗೆ ಅಲ್ಲೆ ಅಲ್ಪ ಬಹುಮತದಿಂದ ಏರಿದ್ದ ಕಾಂಗ್ರೆ ಸರ್ಕಾರ ಈ ಚುನಾವಣೆಯನ್ನು ದೊಂಬಿ ಗಲಭೆಗಳ ಚುನಾವಣೆಯನ್ನಾಗಿ ಪರಿವರ್ತಿಸಿತು ಶಾಂತಿಯುತ ಚುನಾವಣೆ ತನಗೆ ಸೋಲು ತರುವುದೆಂಬ ಬಗ್ಗೆ ಕಾಂಗ್ರೆಗೆ ಸ್ವಲ್ಪವೂ ಸಂಶಯವಿರಲಿಲ್ಲ. ಗೂಂಡಾಗಳ ದೊಡ್ಡ ತುಕಡಿಗಳು, ಸೈನ್ಯ ಇವುಗಳು ಕಾಂಗ್ರೆನ ನೆರವಿಗೆ ಬಂದವು. ಮತದಾರರ ಮೇಲೆ ಹಲ್ಲೆ ನಡೆಸಲಾಯಿತು ಮತದಾರರಿಗೆ ಬೆದರಿಕೆ ಹಾಕಲಾಯಿತು. ವಿಧಾನ ಸಭೆಯಲ್ಲಿ ಅಲ್ಪ ಬಹುಮತ ಹೊಂದಿದ್ದ ಕಾಂಗ್ರೆಗೆ ಈ ಕ್ಷೇತ್ರದಲ್ಲಿನ ಸೋಲು ಮರ್ಮಾಘಾತುಕವಾದುದೆಂಬ ಅರಿವು ಈಗಲೇ ಆಗಿ ಹೋಗಿತ್ತು. ಇನ್ನೂ ಅಧಿಕಾರವೇ ಕೈಯಲ್ಲಿರುವಾಗ ಸುಮ್ಮನೇ ಕುಳಿತಿರಲು ಸಾಧ್ಯವೆ ? ಒಂದು ಚುನಾವಣಾ ಭಾಷಣದಲ್ಲಿ ಮುಖ್ಯಮಂತ್ರಿ ಮತದಾರರಿಗೆ ಈ ರೀತಿ ಎಚ್ಚರಿಕೆ ನೀಡಿದ್ದರು. "ಒಬ್ಬನೇ ಒಬ್ಬ ಮತದಾರನೂ ನನಗೆ ಮತ ನೀಡದಿದ್ದರೂ ಗೆಲ್ಲುವುದು ಹೇಗೆಂದು ನನಗೆ ಗೊತ್ತಿದೆ." ಹೇಗಿದೆ ಈ ಆಧುನಿಕ ಪವಾಡ ಪುರುಷನ ಮಾತು. ಈ ಮಾತನ್ನೇ ಘಟಿಕ್ರಾಯ್‌ನಲ್ಲಿ ಅವರು ಕಾರ್ಯರೂಪಕ್ಕೆ ತಂದರು.

ಸಿಪಿಎಂ ಪಕ್ಷ ನ್ಯಾಯಯುತವಾದ ಮತದಾನ ಸಾಧ್ಯವೇ ಇಲ್ಲವೆಂದು ಖಾತ್ರಿಯಾದಾಗ ಚುನಾವಣಾ ಕಣದಿಂದ ಹಿಂದಿಗೆಯಿತು. ಅದು ನ್ಯಾಯಯುತವಾಗಿ ನಡೆಯದಿದ್ದರೆ ಚುನಾವಣೆಗೆ ಅರ್ಥವೇನು ?

"ಸಿಪಿಎಂ ಅನ್ನು ಅಳಿಸಿ ಹಾಕುತ್ತೇನೆ"

ತ್ರಿಪುರಾದ ಕಾಂಗ್ರೆ ಗೃಹ ಮಂತ್ರಿ ಉದುರಿಸಿದ ಅಣಿ ಮುತ್ತುಗಳು.

ಇಂದಿನಿಂದ ಎಲ್ಲ ಸರಕಾರಿ ಪರಿಹಾರ ಕಾರ್ಯಗಳ ಸಾಲವೇಳ, ಐ ಆರ್.ಡಿ. ಪಿ. ಮತ್ತು ಸರಕಾರಿನೌಕರಿಗಳ ಲಾಭ ಕಾಂಗ್ರೆ ಮತ್ತು ತ್ರಿಪುರಾ ಉಪಜಾತಿ ಜುಬಾ ಸಮಿತಿಯ ಕಾರ್ಯಕರ್ತರಿಗೆ ಹೋಗುತ್ತದೆ. ಸಿಪಿಐ(ಎಂ)ಗೆ ಸೇರಿದ ಯಾರಿಗೂ ಅದು ಹೋಗುವುದಿಲ್ಲ. ಯಾವುದೇ ಸಿಪಿಐ(ಎಂ) ಕಾರ್ಯಕರ್ತ ಸಕ್ರೀಯವಾಗಿದ್ದು, ಸರಕಾರ ಮತ್ತು ಮಂತ್ರಿ ಮಂಡಲದ ಟೀಕೆಯಲ್ಲಿ ತೊಡಗಿದರೆ ಆತನಿಗೆ ನಮ್ಮ ಯುವಕರು ಸರಿಯಾದ ಪಾಠ ಕಲಿಸುತ್ತಾರೆ. ಪೋಲೀಸರು ನಮ್ಮವರೊಂದಿಗೆ ಪೂರ್ಣ ಸಹಕರಿಸುತ್ತಾರೆ. ನಾನು ನಮ್ಮ ಯುವಕರನ್ನು ಕೇಳಿಕೊಳ್ಳುವುದೇನೆಂದರೆ ಯಾವತ್ತೂ ಪೋಲಿಸರೊಂದಿಗೆ ಸರಿಯಾಗಿ ನಡೆದುಕೊಳ್ಳಿ. ಅವರು ನಮಗೆ ಸಹಕಾರ ನೀಡುತ್ತಾರೆ. ಯಾವುದೇ ಶಿಕ್ಷಕ ಅಥವಾ ನೌಕರ ತನ್ನ ಕರ್ತವ್ಯವನ್ನು ನಿರ್ಲಕ್ಷಿಸಿದರೆ ಮತ್ತು ಸರ್ಕಾರವನ್ನು ಟೀಕಿಸಿದರೆ ಯುವಕಾಂಗ್ರೆ ಕಾರ್ಯಕರ್ತರು ಅಂಥವರನ್ನು ಗುರುತಿಸಿ ಶಿಕ್ಷಿಸುವರು. ನಮ್ಮ ಸರ್ಕಾರ ಉರುಳುತ್ತದೆ. ಯಾಕೆಂದರೆ ನಾವು ಅಸಮರ್ಥರು ಎಂದು ಸಿಪಿಐ(ಎಂ) ನ ಜನ ಹೇಳುತ್ತಾರೆ. ಸಮೀರ್ ರಂಜನ್ ಬರ್ಮನ್ ಆದ ನಾನು ನಿಮಗೆ ಹೇಳಬಯಸುತ್ತೇನೆ-ನಾನು ಜೀವಂತ ಇರುವವರೆಗೆ ತ್ರಿಪುರಾದ ಮಣ್ಣಿನ ಮೇಲೆ ಸಿಪಿಐ(ಎಂ) ಇರುವುದಿಲ್ಲ. ನಾನು ಅವರನ್ನು ಅಳಿಸಿ ಹಾಕುತ್ತೇನೆ. ಪುನಃ ಅಧಿಕಾರಕ್ಕೆ ಬರುವ ಅವರ ಕನಸನ್ನು ಸುಟ್ಟು ಹಾಕುತ್ತೇನೆ. ಮುಂದಿನ ಐದು ವರ್ಷಗಳಲ್ಲಿ ಒಬ್ಬನೇ ಒಬ್ಬ ಸಿಪಿಐ(ಎಂ) ಸದಸ್ಯನೂ ಜೀವಂತ ಇರುವುದಿಲ್ಲ. ನೀವು ಕಾಂಗ್ರೆ ಯುವಕರು ಶಿಕ್ಷಕರು ಮತ್ತು ನೌಕರರ ಚಟುವಟಿಕೆಗಳ ಮೇಲೆ ಗಮನವಿಟ್ಟು ಅವರು ತಮ್ಮ ಕರ್ತವ್ಯವನ್ನು ನಿರ್ಲಕ್ಷಿಸಿದರೆ ಅವರನ್ನು ಶಿಕ್ಷಿಸುವಿರಿ"

ರಾಜ್ಯದ ವಿವಿಧೆಡೆ ಗೈರಾಣಿ-ಬಗುರ್ ಹುಕುಂ

ಸಾಗುವಳಿ ರೈತರ ಸಮಾವೇಶಗಳು

ಆಳಂದ

ಗೈರಾಣಿ ಜಮೀನು ಸಾಗುವಳಿ ಮಾಡುತ್ತಿರುವ ರೈತ-ಕೃಷಿ ಕೂಲಿಗಾರರನ್ನು ಸರ್ಕಾರ ಸಮಾಜಿಕ ಅರಣ್ಯ ಭೂಮಿ ಹೆಸರಿನಲ್ಲಿ ರೈತರನ್ನೂ ಎತ್ತಂಗಡಿ ಮಾಡಿ ಓಡಿಸುತ್ತಿರುವ ನೀತಿಯನ್ನು ಸಿ. ಪಿ ಐ. (ಎಂ) ಪಕ್ಷದ ಶಾಸಕ ಕಾ. ಆರ್. ವೆಂಕಟರಾಮಯ್ಯನವರು ಖಂಡಿಸಿದರು. ಅವರು ಗುಲ್ಬರ್ಗಾ ಜಿಲ್ಲೆ ಆಳಂದ ತಾಲೋಕು ಕರ್ನಾಟಕ ಪ್ರಾಂತ ರೈತ ಸಂಘ ಏರ್ಪಡಿಸಿದ್ದ ಗೈರಾಣಿ ಜಮೀನು ಸಾಗುವಳಿದಾರರ ಸಮಾವೇಶದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡುತ್ತಿದ್ದರು. ಗೈರಾಣಿ ಸಾಗುವಳಿ ಮಾಡುವ ರೈತರಿಗೆ ನೀಡುತ್ತಿರುವಕಿರುಕುಳದ ವಿರುದ್ಧ ಹೋರಾಟ ನಡೆಸಬೇಕೆಂದು ಗುಲ್ಬರ್ಗಾದ ಸಿ ಪಿ. ಐ. (ಎಂ) ಪಕ್ಷದ ಜಿಲ್ಲಾ ಪರಿಷತ್ ಸದಸ್ಯರಾದ ಕಾ. ಮಾರುತಿ ಮಾನ್ಪಡೆಯವರು ಕರೆ ನೀಡಿದರು. ವಕೀಲರಾದ ಕಾ. ಬಸವರಾಜ ಮುರಡಿಯವರು ಅಧ್ಯಕ್ಷತೆ ವಹಿಸಿದ್ದರು ತಾಲೋಕಿನ ವಿವಿಧ ಗ್ರಾಮಗಳಿಂದ ಸುಮಾರು 500 ರೈತರು ಈ ಸಮಾವೇಶದಲ್ಲಿ ಭಾಗವಹಿಸಿದ್ದರು. ಆಳಂದ ಟೌನ್‌ನ ಪ್ರಮುಖ ಬೀದಿಯಲ್ಲಿ ಮೆರವಣಿಗೆ ನಡೆಸಿದ ನಂತರ ಬೇಡಿಕೆಯ ಮನವಿ ಪತ್ರವನ್ನು ತಾಹಸೀಲ್ದಾರ್‌ರವರಿಗೆ ಅರ್ಪಿಸಲಾಯಿತು.

ಶಹಾಪುರ

ಶಹಾಪುರ ತಾಲೂಕಿನ ಸುರಪುರದಲ್ಲಿ ಮೇ 10ರಂದು ಬಗರ್‌ಹುಕುಂ ಸಾಗುವಳಿದಾರ ರೈತರ ಸಮಾವೇಶವನು ವಕೀಲರಾದ ಕಾ. ಜಿ. ಅಗಸ್ಟಿನ್‌ರವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಮುಖ್ಯ ಅತಿಥಿಗಳಾಗಿ ಕಾ. ಚಂದ್ರಶೇಖರ ಪಾಟೀಲ, ಮಾರುತಿ ಮಾನ್ಪಡೆ ಪಕ್ಷದ ಜಿಲ್ಲಾ ಕಾರ್ಯದರ್ಶಿ ಕಾ. ಕಲ್ಲಪ್ಪ ಕಿರಣಗಿ ಯವರುಗಳು ಭಾಗವಹಿಸಿದ್ದರು.

ರೈತ-ಕೃಷಿ ಕೂಲಿಗಾರರ ಸಂಘಟನೆಯನ್ನು ಜಿಲ್ಲೆಯಲ್ಲಿ ಬಲಿಷ್ಟವಾಗಿ ಕಟ್ಟಿ ಬೆಳೆಸಲು ನೀವೆಲ್ಲರೂ ಶ್ರಮಿಸಬೇಕೆಂದು ಮಾತನಾಡಿದ ಎಲ್ಲಾ ಭಾಷಣಕಾರರು ಹೇಳಿದರು. ಸಮಾವೇಶದಲ್ಲಿ 5 ಠರಾವುಗಳನ್ನೂ ಅಂಗೀಕರಿಸಲಾಯಿತು. ಪ್ರಾರಂಭದಲ್ಲಿ ಕಾ. ಭೀಮಣ್ಣ ಪಾಟೀಲ್ ಸ್ವಾಗತಿಸಿ ಕೊನೆಯಲ್ಲಿ ಕಾ. ದೇವಿಂದ್ರಪ್ಪ ಮಾಲಿ ಬಿರಾದಾರ ವಂದನಾರ್ಪಣೆ ಮಾಡಿದರು

ಸುರಪುರದ ಪ್ರಮುಖ ಬೀದಿಯಲ್ಲಿ 500 ರೈತರ ಬೃಹತ್ ಮೆರವಣಿಗೆ ನಡೆಸಲಾಯಿತು.

ತಾಲ್ಲೋಕು ಕಛೇರಿ ಚಲೋ

ಕರ್ನಾಟಕ ಪ್ರಾಂತ ರೈತ ಸಂಘದ ಯಾದಗಿರಿ ತಾಲೋಕು ಸಮಿತಿ ನೇತೃತ್ವದಲ್ಲಿ ತಾಲೋಕಿನ ಸುಮಾರು 20 ಗ್ರಾಮಗಳಲ್ಲಿ ರೈತರ ಸಭೆಯನ್ನು ನಡೆಸಿ, ಗೈರಾಣಿ ಜಮೀನು ಸಾಗುವಳಿದಾರ ರೈತರಿಂದ ಅರ್ಜಿಗಳನ್ನು ಪಡೆದು ಮೇ 30ರಂದು ಸಹಸ್ರ ರೈತರು ಯಾದಗಿಯ ಬಸವೇಶ್ವರ ಗಂಜನಿಂದ ಬೀದಿಯುದ್ದಕ್ಕೂ ಕೆಂಬಾವುಟ ಕಹಳೆಯ ಸದ್ದು ಜನತೆಯನ್ನು ಬೆರಗೊಳಿಸಿತು. ತಹಸೀಲ್ದಾರ್ ಕಛೇರಿ ಮುಂದೆ ಸೇರಿ ಬಹಿರಂಗ ಸಭೆ ನಡೆಸಿದರು.

ರೈತ ಸಂಘದ ಗುಲಬರ್ಗಾ ಜಿಲ್ಲಾ ಸಮಿತಿ ನಾಯಕರಾದ ಕಾಂ. ಮಾರುತಿ ಮಾನ್ಪಡೆ, ಮನೋಹರ ಪಾಟೀಲ, ಗೋಪಾಲ, ಶರಣಪ್ಪ ಜಾಕನಹಳ್ಳಿ ಯವರುಗಳು ಎಲ್ಲಾ ಗ್ರಾಮಗಳಲ್ಲಿ ಸಂಚರಿಸಿ ರೈತರನ್ನುದ್ದೇಶಿಸಿ ಮಾತನಾ ಈ ಸಭೆಗಳಲ್ಲಿ ರೈತರು ಭಾರಿ ಉತ್ಸಾಹದಿಂದ ಪಾಲ್ಗೊಳ್ಳುತ್ತಿದ್ದರು ಹಲವಾರು ಪ್ರಶ್ನೆಗಳನ್ನು ಮುಂದಿರಿಸಿ ಅವರ ಸಂಕಷ್ಟಗಳ ಕುರಿತು ವಿವರಿಸುತ್ತಿದ್ದರು.

ಮೇ 28 ಮತ್ತು 29 ರಂದು ಜೀಪ್ ಜಾಥ ನಡೆಸಲಾಯಿತು. ಮೇ 30ರಂದು ಗೈರಾಣಿ ರೈತರ 500 ಅರ್ಜಿಗಳನ್ನು ಹಾಗೂ ಬೇಡಿಕೆಗಳ ಮನವಿ ಪತ್ರವನ್ನು ತಹಸೀಲ್ದಾರ್‌ರವರಿಗೆ ಅರ್ಪಿಸಿ ರೈತರ ಬೇಡಿಕೆಗಳನ್ನು ಬಗೆಹರಿಸಬೇಕೆಂದು ಸಭೆಯನ್ನುದ್ದೇಶಿಸಿ ಮಾತನಾಡಿದ ರೈತನಾಯಕರು ತಹಸೀಲ್ದಾರರನ್ನು ಒತ್ತಾಯಿಸಿದರು.

ಪರಿಹಾರ ನೀಡಲು ಒತ್ತಾಯ

ಸುರಪುರ ತಾಲೋಕು ದೇವಾಪುರ ಗ್ರಾಮದ 61 ಹರಿಜನ ಕುಟುಂಬಗಳ ಮನೆಗಳು ಬೆಂಕಿಗೆ ಆಹುತಿಯಾಗಿ ಆಹಾರ ಧಾನ್ಯ, ಬಟ್ಟೆ ಮತ್ತು ಅವರಿಗೆ ವಾಸಿಸಲು ಮನೆ ಇಲ್ಲದ ತೀವ್ರ ಸಂಕಷ್ಟಕ್ಕೀಡಾಗಿದ್ದು ಗುಲ್ಬರ್ಗಾ ಜಿಲ್ಲಾ ಪರಿಷತ್ ನೊಂದ ಹರಿಜನ ಕುಟುಂಬಗಳಿಗೆ ಕೂಡಲೇ ನೆರವು ಒದಗಿಸಬೇಕೆಂದು ಸಿ. ಪಿ. ಐ. (ಎಂ) ಪಕ್ಷ, ಕರ್ನಾಟಕ ಪ್ರಾಂತ ರೈತ ಸಂಘ ಹಾಗೂ ಎಸ್. ಎಫ್. ಐ. ನಿಯೋಗ ಒತ್ತಾಯಿಸಿದೆ. ಕಾ. ಕಲ್ಲಪ್ಪ ಕಿರಣಗಿ, ಚನ್ನಪ್ಪ ಆನೆಗುಂದಿ, ಮತ್ತು ಚನ್ನಬಸು ನಿಯೋಗದ ನೇತೃತ್ವ ವಹಿಸಿದ್ದರು.

ಹಗರಣಗಳ ಆಗರ ಮಂಗಳೂರು ವಿ. ವಿ.

(2ನೇ ಪುಟದಿಂದ)

ಪತ್ರಿಕೆ ಬಹಿರಂಗ ಮತ್ತು ವ್ಯಾಲ್ಯುಯೇಶನ್ ಸ್ಕೀಮ್‌ನಲ್ಲಿನ ಮೋಸಗಳು ವಿದ್ಯಾರ್ಥಿ ಹಾಗೂ ಅಧ್ಯಾಪಕರುಗಳಿಂದ ಬೆಳಕಿಗೆ ಬಂದಿದ್ದು, ಇದೀಗ ಬಿ.ಕಾಂ.ಫಲಿತಾಂಶತಡೆ ಹಿಡಿಯಲ್ಪಟ್ಟಿದೆ. ವಿದ್ಯಾರ್ಥಿಗಳು ತುಯ್ದಾಟದಲ್ಲಿದ್ದಾರೆ.

ಅಧ್ಯಾಪಕ ಹುದ್ದೆಗಳಿಗೆ ನೇಮಕಾತಿ ನಡೆಸುವಲ್ಲಿ ಕಣ್ಣಿಗೆ ರಾಚುವಂಥ ಅನ್ಯಾಯ ನಡೆದಿದೆ. ಕೇವಲ ಪಿ.ಯು.ಸಿ. ವಿದ್ಯಾರ್ಥಿಗಳಿಗೆ ಪಾಠ ಮಾಡಿದ ಅನುಭವವಿರುವ ವ್ಯಕ್ತಿಗೆ ವಿಜ್ಞಾನ ವಿಭಾಗದಲ್ಲಿ ನೇಮಕಾತಿ ಆಗಿದೆ. ಈತ ವಿ ವಿ. ಯ ಉಪಕುಲಪತಿಯವರ ಪುತ್ರ ಎನ್ನುವುದೇ ಅವರ ಏಕೈಕ ಹಾಗೂ ಹೆಚ್ಚುವರಿ ಅರ್ಹತೆಯೇ ಹೊರತು ಬೇರೇನಿಲ್ಲ. ಇವರಿಗಿಂತ ಹೆಚ್ಚು ಹಾಗೂ ಸೂಕ್ತ ಅರ್ಹತೆಗಳಿದ್ದವರು 'ಚಾಚಾ' ಆಗಿದ್ದಾರೆ.

ಇನ್ನು ಮೊದಲೇ ಹೇಳಿರುವಂತೆ ಖಾಸಗಿಯವರ ಹಿತಕಾಯುವಲ್ಲಿ ಮುನ್ನಡೆ ಸಾಧಿಸಿರುವ ವಿ ವಿ., ಅಫಿಲಿಯೇಶನ್ ಕಮಿಷನ್‌ಗಳ ನೇಮಕಾತಿಯಲ್ಲೂ ಸ್ಥಾಪಿತ ಹಿತಾಸಕ್ತಿ ಕೂಟಗಳಿಗೆ ಪಾತಿನಿಧ್ಯ ನೀಡಿದೆ.

ಜನರ ಕ್ರೀಡಾಭಿವೃದ್ಧಿಯ ಬಗ್ಗೆ ಮಂಗಳೂರುವಿ ವಿ.ಗೆ ಅತೀವ ಆಸಕ್ತಿ! ಅದಕ್ಕಾಗಿ 'ಗಾಲ್ಫ್' ತರಬೇತಿ ಕೋರ್ಸ್‌ನ್ನು ಅದು ಆರಂಭಿಸುತ್ತದೆ. ಸಾರ್ವಜನಿಕ ನಿಧಿಯಿಂದ ಶ್ರೀಮಂತರಿಗೆ ದುಬಾರಿ ಕ್ರೀಡೆ ಕಲಿಕೆಯ ಸನ್ನಾಹ.

ಒಟ್ಟಿನಲ್ಲಿ ದುರ್ವ್ಯವಹಾರ, ಸ್ವಜನ ಪಕ್ಷಪಾತದಂಥ ಅನ್ಯಾಯಗಳು ದಕ್ಷವೆಂದೆಸಿದ್ದ ಮಂಗಳೂರು ವಿ. ವಿ. ಯಲ್ಲಿ ಅನ್ಯಾಯಗಳು ಕಂಡು ಬರುತ್ತಿವೆ. ಈ ಪ್ರಕರಣಗಳ ಬಗ್ಗೆ ಸಾರ್ವಜನಿಕರಲ್ಲಿ ತಿಳುವಳಿಕೆ ಮೂಡಿಸಿ ಹೋರಾಟಕ್ಕೆ ಅಣಿನೆರೆಸುವ ಕಾರ್ಯವೂ ಜಿಲ್ಲೆಯಲ್ಲಿರುವ ಪ್ರಗತಿಪರ ವ್ಯಕ್ತಿ-ಶಕ್ತಿಗಳಿಂದ ಆರಂಭವಾಗಿದೆ. ಇದರಲ್ಲಿ ಎಸ್.ಎಫ್.ಐ. ಕೂಡಗಣನೀಯ ಪಾತ್ರ ವಹಿಸುತ್ತಿದೆ. ವಿ.ವಿ ಯ ಅವ್ಯವಹಾರಗಳ ಬಗ್ಗೆ ನ್ಯಾಯಾಂಗ ತನಿಖೆ ನಡೆಸಬೇಕೆಂದು ಅಕಾಡೆಮಿಕ್ ಕಾನ್ಸಿಲ್ ಸದಸ್ಯರಾದ ನರೇಂದ್ರ ನಾಯಕ್, ಅನಂತಕೃಷ್ಣ ಭಟ್ ಹಾಗೂ ಸೆನೆಟ್ ಸದಸ್ಯ ಮೋಹನ್ ಪಿ.ವಿ. ರಾಜ್ಯಪಾಲರನ್ನು ಒತ್ತಾಯಿಸಿದ್ದಾರೆ.

ಜೂನ್ 3ರಂದು "ಮಂಗಳೂರು ವಿ.ವಿ. ಉಳಿಸಿ ಹೋರಾಟ ಸಮಿತಿ" ರಚನೆಯಾಗಿದ್ದು, ಹೋರಾಟದ ಮೊದಲ ಹಂತವಾಗಿ ಜೂನ್ 6ರಂದು ಕುಲಸಚಿವರ ಕಚೇರಿ ಎದುರು ಸಮಿತಿ ನೇತೃತ್ವದಲ್ಲಿ ಧರಣಿ ಮುಷ್ಕರ ನಡೆಯಿತು. ಮುಂದಿನ ದಿನಗಳಲ್ಲಿ ಹೋರಾಟ ವ್ಯಾಪಕಗೊಳ್ಳುವ ನಿರೀಕ್ಷೆಯಿದೆ.

— ವಿಶ್ವ ಕುಂದಾಪುರ

ಮಾನವ ಹಕ್ಕು : ಎರಡು ಪತ್ರಗಳು

ಅಮೇರಿಕದ ಅಧ್ಯಕ್ಷ ರೇಗನ್‌ರವರು ಇತ್ತೀಚೆಗೆ ಸೋವಿಯತ್ ದೇಶಕ್ಕೆ ಭೇಟಿ ನೀಡುವಾಗ ಮಾನವ ಹಕ್ಕುಗಳ ಉಲ್ಲಂಘನೆಯ ಬಗ್ಗೆ ಭಾರಿ ಭಾರಿ ಮಾತನಾಡಿದ್ದಾರೆ. ರೇಗನ್‌ರವರು ಮಾನವ ಹಕ್ಕುಗಳು ಎಂದರೆ ಏನೆಂದು ತಿಳಿದಿದ್ದಾರೋ ಗೊತ್ತಿಲ್ಲ.

ಒಂದು ದೇಶ ಪ್ರಜಾಪ್ರಭುತ್ವವನ್ನು ಅಳವಡಿಸಿಕೊಂಡಿದೆ ಎಂದ ಮಾತ್ರಕ್ಕೆ ಅವು ಮಾನವ ಹಕ್ಕುಗಳನ್ನು ಹೊಂದಿವೆ ಎಂದೇನಲ್ಲ. ಭಾರತವನ್ನೂ ಒಳಗೊಂಡಂತೆ ಹಲವು ಅಭಿವೃದ್ಧಿ ಶೀಲ ದೇಶಗಳಲ್ಲಿ ಮಾನವನ ಕನಿಷ್ಟ ಸೌಲಭ್ಯಗಳನ್ನೂ ಒದಗಿಸಲಾಗದ್ದನ್ನು ಕಣ್ಣಾರೆ ಕಾಣುತ್ತಿದ್ದೇವೆ.

ಅಮೇರಿಕಾದಂತಹ ದೇಶದಲ್ಲಿ ಮಾನವ ಹಕ್ಕುಗಳು ಉಲ್ಲಂಘನೆಯಾಗುತ್ತಿರುವ ಪರಿಯನ್ನು ನಾವು ಕಾಣುತ್ತಿದ್ದೇವೆ. ಮಾನವ ಹಕ್ಕು ಎಂದರೆ ಸ್ವೇಚ್ಛಾಚಾರವಲ್ಲ. ಅಮೇರಿಕಾದಲ್ಲಿ ಹಸಿವಿಗೆ ಬಲಿಯಾಗುತ್ತಿರುವವರನ್ನು ನಾವು ಕಾಣುತ್ತಲೇ ಇದ್ದೇವೆ. ಇದಕ್ಕೆ ಸ್ವಾತಂತ್ರ್ಯ ಎಂಬುದು ಬೇಕೆ ?

ರೇಗನ್ ಇದೆಲ್ಲವನ್ನು ವೈಭವೀಕರಿಸುತ್ತಾ ಹೋಗುವುದು ಬೇಡ

—ಕೆ. ಕೃಷ್ಣಕುಮಾರ್

"(ಡೆಕ್ಕನ್ ಹೆರಾಲ್ಡ್)"

ಮಾನವ ಹಕ್ಕಿನ ಬಗ್ಗೆ ಉದ್ದುದ್ದ ಭಾಷಣ ಬಿಗಿಯುತ್ತಿರುವುದು ಅತ್ಯಾಶ್ಚರ್ಯದ ಸಂಗತಿ. ಮಾನವ ಹಕ್ಕಿನ ಬಗ್ಗೆ ಮಾತನಾಡುತ್ತಲೇ ದಕ್ಷಿಣ ಆಫ್ರಿಕಾದಲ್ಲಿ ಜನರನ್ನು ದಮನ ಮಾಡಲು ಬೋಥಾಗೆ ಸರ್ವ ರೀತಿಯ ಬೆಂಬಲ ನೀಡುತ್ತಿರುವುದು, ನಮೀಬಿಯಾದ ಸ್ವಾತಂತ್ರ ಹೋರಾಟಕ್ಕೆ ಅಡ್ಡಿಯುಂಟು ಮಾಡುತ್ತಿರುವುದು ಮಾನವ ಹಕ್ಕಿನ ಪ್ರತಿಪಾದನೆಯೆ ?

-ಎ. ರಮೇಶ್

('ಪ್ರಜಾವಾಣಿ')

ಚೀನಾಕ್ಕೆ ಸಿಪಿಐ [ಎಂ] ನಿಯೋಗ

ಜ್ಯೋತಿ ಬಸು, ಹರಿಕಿಷನ್ ಸಿಂಗ್ ಸುರ್ಜಿತ್ ನೃಪೇನ್ ಚಕ್ರವರ್ತಿ, ಬುದ್ಧದೇವ ಭಟ್ಟಾಚಾರ್ಯರನ್ನೊಳಗೊಂಡ ಐವರ ನಿಯೋಗವು ಇದೇ ತಾನೆ ಜೂನ್ 11 ರಂದು ವಾಪಸಾಯಿತು. ಎರಡು ವಾರಗಳ ಈ ಭೇಟಿಯಲ್ಲಿ ಹಲವು ಪ್ರಾಮುಖನಾಯಕರನ್ನು ಭೇಟಿ ಮಾಡಲಾಯಿತು.

ಭಾರತದ ಬಗ್ಗೆ ಚೀನಾ ಅಪಾರ ವಿಶ್ವಾಸ ಹೊಂದಿದೆ. ಭಾರತ ಮತ್ತು ಚೀನಾ ಎರಡೂ ದೇಶಗಳು ಪರಸ್ಪರ ಅಭಿವೃದ್ಧಿಗೆ ಮುಂದಾಗಲು ಸಿದ್ಧವಾಗಿದೆ. ಗಡಿವಿವಾದವೂ ಈ ಹಂತದಲ್ಲಿ ಬಗೆ ಹರಿಯುತ್ತದೆ. ಎಂದು ಸುರ್ಜಿತ್ ಆಶಿಸಿದರು. ಚೈನಾ ಪ್ರವಾಸದ ಬಗ್ಗೆ ಸುರ್ಜಿತ್‌ರವರು ಸದ್ಯದಲ್ಲೇ 'ಪೀಪಲ್ಸ್ ಡೆಮಾಕ್ರಸಿ' ಯಲ್ಲಿ ವಿವರ ಲೇಖನ ಬರೆಯಲಿದ್ದಾರೆ.

ವಿಚ್ಛಿದ್ರಕಾರಿಗಳ ವಿರುದ್ಧ

ಪಂಜಾಬ್‌ನಲ್ಲಿ ವಿಚ್ಛಿದ್ರಕಾರಿಗಳ ವಿರುದ್ಧ ಎದೆಗುಂದಿದೆ ಹಲವಾರು ಕಾರ್ಯಕ್ರಮ,ಬಲಿದಾನಗಳ ಮೂಲಕ ಅವರನ್ನುಎದುರಿಸಿ ನಿಲ್ಲುವಲ್ಲಿ ಉಭಯ ಕಮ್ಯುನಿಸ್ಟ್ ಪಕ್ಷಗಳ ಪಾತ್ರವನ್ನು ಯಾರೂ ಅಲ್ಲಗಳೆಯಲಾರರು. ಇದೀಗ ಈ ಕಾರ್ಯ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿದೆ.

ಇದೀಗ ಉಭಯ ಕಮ್ಯುನಿಸ್ಟ್ ಪಕ್ಷಗಳು ಪಂಜಾಬ್‌ನ ಮೇಲೆ ಹೇರಲಾಗಿರುವ 59ನೇ ತಿದ್ದುಪಡಿ ಯನ್ನು ವಾಪಸ್ ತೆಗೆದುಕೊಳ್ಳುವಂತೆ ಒತ್ತಾಯಿಸಿ ಬೃಹತ್ ಜಂಟಿ ಸಮಾವೇಶ ನಡೆಸಿತು. 5 ಸಾವಿರಾರು ಹೆಚ್ಚು ಪ್ರತಿನಿಧಿಗಳನ್ನು ಹೊಂದಿದ ಈ ಬೃಹತ್ ಸಭೆ ಉರಿಯುವ ಬಿಸಿಲನ್ನು ಲೆಕ್ಕಿಸದೆ ನಡೆಯಿತು. ಬೆಳಗಿನಿಂದಲೇ ಪ್ರತಿನಿಧಿಗಳು ಕೆಂಬಾವುಟ ಹಾರಿಸುತ್ತಾ ಮೆರವಣಿಗೆಗಳಲ್ಲಿ ಬಂದರು. ಭಗತ್ ಸಿಂಗ್‌ರ ಜೊತೆಗಾರ ಕಿಶೋರಿಲಾಲ್ ಈ ಸಮಾವೇಶದ ಅಧ್ಯಕ್ಷತೆ ವಹಿಸಿದ್ದರು. ಹರ್ ಕಿಷನ್‌ಸಿಂಗ್ ಸುರ್ಜೀತ್, ರಾಜೇಶ್ವರ ರಾವ್‌ರನ್ನೊಳಗೊಂಡಂತೆ ಹಲವು ನಾಯಕರು ಮಾತನಾಡಿದರು.

ಇಪ್ಪತ್ತು ವರ್ಷ ತುಂಬಿದ ಯುವಜನ ಸಂಘಟನೆ

ಪಶ್ಚಿಮ ಬಂಗಾಳದ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್‌ಗೆ ಇದೀಗ ಇಪ್ಪತ್ತು ವರ್ಷ 36 ಸಾವಿರ ಸದಸ್ಯತ್ವದಿಂದ ಪ್ರಾರಂಭವಾದ ಸಂಘಟನೆ ಇದೀಗ 24,050,000 ಸದಸ್ಯತ್ವವನ್ನು ದಾಟಿ ದಾಖಲೆ ಆಚರಿಸಿದೆ.

ಜೂನ್ 9 ರಂದು ಕಲ್ಕತ್ತದ ನೇತಾಜಿ ಸ್ಟೇಡಿಯಂನಲ್ಲಿ ಇದನ್ನು ಆಚರಿಸಲು ಬೃಹತ್ ಸಮಾವೇಶ ಕರೆಯಲಾಗಿತ್ತು. ಎಡರಂಗದ ಮುಖ್ಯಸ್ಥ ಸರೋಜ್ ಮುಖರ್ಜಿಯವರು ಮಾತನಾಡುತ್ತಾ ಸದ್ಯದ ಪರಿಸ್ಥಿತಿ,ತೊಳಲಾಟಗಳಿಂದ ದೇಶವನ್ನು ಪಾರಾಗಿಸಲು ಯುವಜನರು ಮುಂದಾಗಬೇಕಾಗಿದೆ ಎಂದು ಕರೆಯಿತ್ತರು.

ಸಂಘಟನೆಯ ಮೂಲ ಸಂಸ್ಥಾಪಕರಾದ ಕಾಮ್ರೇಡ್ ದಿನೇಶ್ ಮಜುಂದಾರ್ ಹಾಗೂ ಶಂಕರ್ ಗುಪ್ತಾರವರನ್ನು ಈ ಸಂದರ್ಭದಲ್ಲಿ ನೆನಸಲಾಯಿತು.

ಬಾಗೇಪಲ್ಲಿ ರೈತರ ತಾಲ್ಲೂಕು ಕಛೇರಿ ಚಲೋ

ಹಲವಾರು ವರ್ಷಗಳಿಂದ ಬಗರ್ ಹುಕ್ಕುಂ ಸಾಗುವಳಿಮಾಡಿ ಜೀವನ ಸಾಗಿಸುತ್ತಿರುವ ಬಡ ಕೃಷಿಕೂಲಿಗಾರರ ಜಮೀನು ಸಾಗುವಳಿ ಹಕ್ಕು ಪತ್ರ ನೀಡಬೇಕೆಂದು ಒತ್ತಾಯಿಸಿ ಕರ್ನಾಟಕ ಪ್ರಾಂತ ರೈತ ಸಂಘದ ಬಾಗೇಪಲ್ಲಿ ತಾಲೋಕು ಸಮಿತಿ ನೇತೃತ್ವದಲ್ಲಿ ಸಾವಿರಾರು ರೈತರು ತಾಲೂಕು ಕಛೇರಿ ಚಲೋ ಕಾರ್ಯ ಕ್ರಮ ಯಶಸ್ವಿಗೊಳಿಸಲಾಯಿತು.

ರೈತ ಸಂಘದ ಕಾರ್ಯಕರ್ತರು ಮುಖಂಡರು ತಾಲೋಕಿನ ಮೂಲೆ ಮೂಲೆಯನ್ನು ಬಿಡದೇ 240 ಹಳ್ಳಿಗಳನ್ನು ಸುತ್ತಿ ಬಡ ಕೃಷಿ ಕೂಲಿಗಾರ ರೈತರನ್ನು ಗುರುತಿಸಿ ಅವರ ಬದುಕಿನ ಬವಣೆಗೆ ಸ್ಪಂದಿಸಿದ್ದಾರೆ.

ತಾಲೋಕಿನಾದ್ಯಂತ ಸುಮಾರು 5,840 ಬಗರ್ ಹುಕ್ಕುಂ ಸಾಗುವಳಿ ರೈತರಿಂದ ಅರ್ಜಿಗಳನ್ನು ರೈತ ಸಂಘದ ಸ್ವೀಕರಿಸಿದೆ.

ಮೇ ರಂದು ತಾಲೋಕಿನ ಎಲ್ಲಾ ಗ್ರಾಮಗಳಿಂದ ಬಂದ ಸಾವಿರ ಸಾವಿರ ರೈತರು ಬೃಹತ್ ರ‍್ಯಾಲಿಯೊಂದನ್ನು ನಡೆಸಿದರು. ಸಾವಿರಕ್ಕೂ ಹೆಚ್ಚು ಮಹಿಳೆಯರು ಇದರಲ್ಲಿ ಭಾಗ ವಹಿಸಿದ್ದು ಮೆರವಣಿಗೆಗೆ ಹೊಸ ಸ್ಫೂರ್ತಿಯನ್ನು ನೀಡಿತು. ಹಳ್ಳಿಯ ಅತ್ಯಂತ ನಿರ್ಗತಿಕ ಬಡ ರೈತ ಮಹಿಳೆಯರು ಕೆಂಬಾವುಟ ಕೈಯಲ್ಲಿ ಹಿಡಿದು ತಮ್ಮ ಕೇಳಿಕೆಯ ಧ್ವನಿಯನ್ನು ತಹಸೀಲ್ದಾರ್ ಕಛೇರಿಗೆ ಅಪ್ಪಳಿಸುವುದನ್ನು ಬಾಗೇಪಲ್ಲಿಯ ಜನತೆ ನೋಡಿ ಬೆರಗಾದರು.

ತಹಸೀಲ್ದಾರ್ ಹಾಗೂ ಅರಣ್ಯಾಧಿಕಾರಿಗಳಿಗೆ ಮನವಿ ಅರ್ಪಿಸಿ ತಮ್ಮ ಬೇಡಿಕೆ ಕುರಿತು ನಿರ್ಲಕ್ಷ್ಯ ತೋರಿದೆ ಆದರೆ-ಸೆಪ್ಟೆಂಬರ್ 15 ರಂದು ತಾಲೋಕು ಕಛೇರಿ ಪಿಕೆಟಿಂಗ್ ನಡೆಸಿ ಜೈಲ್‌ಬರೋ ಚಳುವಳಿ ನಡೆಸುವುದಾಗಿ ಎಚ್ಚರಿಸಲಾಯಿತು. ಬಹಿರಂಗ ಸಭೆಯನ್ನುದ್ದೇಶಿಸಿ ರೈತ ಸಂಘದ ರಾಜ್ಯ ನಾಯಕರಾದ ಕಾ|| ಜಿ ವಿ. ಶ್ರೀರಾಮರೆಡ್ಡಿಯವರು ಹಾಗೂ ಸಿ.ಡಿ. ಗಂಗೂಲಪ್ಪ, ಇ.ಎಸ್. ರಾಮಕೃಷ್ಣಪ್ಪ, ಸಿ.ವೆಂಕಟರಾಮಪ್ಪರವರುಗಳು ಮಾತನಾಡಿದರು.

ಹೋಟೆಲ್ ಕಾರ್ಮಿಕರ ಮೇಲೆ ಪೋಲಿಸರ ಹಲ್ಲೆ

ಕಳೆದ 4 ತಿಂಗಳಿಂದ ಶೇಷಾದ್ರಿಪುರಂ ಎಸ್. ಸಿ. ರಸ್ತೆಯಲ್ಲಿರುವ ಸನ್ಮಾನ ಹೋಟೆಲ್‌ನ ಕಾರ್ಮಿಕರು ಕನಿಷ್ಟ ಕೂಲಿಗಾಗಿ ಒತ್ತಾಯಿಸಿ ಹೋರಾಟ ನಡೆಸುತ್ತಿದ್ದಾರೆ. ಈ ಸಂಬಂಧದಲ್ಲಿ ಆಡಳಿತ ವರ್ಗ 15 ಮಂದಿ ಕಾರ್ಮಿಕರನ್ನು ಕೆಲಸದಿಂದ ವಜಾಮಾಡಿತ್ತು. ವಜಾ ಆದ ಕಾರ್ಮಿರನ್ನು ಮತ್ತೆ ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ಮತ್ತು ಕನಿಷ್ಟ ಕೂಲಿ ಜಾರಿಗೊಳಿಸಬೇಕೆಂದು ಹೋರಾಟ ನಡೆಸುತ್ತಿದ್ದ ಕಾರ್ಮಿಕರನ್ನು 29-6-1988 ರಂದು ಶೇಷಾದ್ರಿಪುರಂ ಪೋಲೀಸರು ಸುಳ್ಳು ಮೊಕದ್ದಮೆ ದಾಖಲು ಮಾಡಿಕೊಂಡು ಅವರನ್ನು ದಸ್ತಗಿರಿಮಾಡಿ ಅಮಾನುಷವಾಗಿ ಹೊಡೆದಿದ್ದಾರೆ. ಅಲ್ಲದೆ ಹೋಟೆಲ್‌ನ [illegible] ಧರಣಿ [illegible] ಅಡ್ಡಿಯುಂಟು ಮಾಡಿದ್ದಾರೆ.

ಬೆಂಗಳೂರು ಜಿಲ್ಲಾ ಹೋಟೆಲ್ ಕಾರ್ಮಿಕರ ಸಂಘವು ಕಾರ್ಮಿಕರ ಮೇಲೆ ನಡೆಯುತ್ತಿರುವ ಹಲ್ಲೆಯನ್ನು ಖಂಡಿಸುತ್ತದೆ. ಪೊಲೀಸರ ಈ ವರ್ತನೆಯನ್ನು ಪ್ರತಿಭಟಿಸಿ ಸಂಘದ ಹೋರಾಟದ ಕಾರ್ಯಕ್ರಮವನ್ನು ರೂಪಿಸಲಿದೆ.

ಸಮುದಾಯದ ಯಶಸ್ವಿ ಜಾಥ

ಸಾಮಾಜಿಕ-ಸಾಂಸ್ಕೃತಿಕ ಶಿಕ್ಷಣದತ್ತ ಸಮುದಾಯ ಜಾಥವೆಂಬ ಜಿಲ್ಲಾ ಮಟ್ಟದ ಸೈಕಲ್ ಜಾಥವನ್ನು ಬೀದರ ಸಮುದಾಯ ಘಟಕ ಇತ್ತೀಚಿಗೆ ಹಮ್ಮಿಕೊಂಡಿತು. ಕಲೆಗಾಗಿ ಕಲೆ ಎಂಬವಾದ ತಿರಸ್ಕರಿಸಿ ಬದುಕಿಗಾಗಿ ಕಲೆ ಎಂಬ ತತ್ವವನ್ನು ಹಾಗೂ ಜನರಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸುವ ನಿಟ್ಟಿನಲ್ಲಿ ಮೇ 18 ರಿಂದ 28 ರ ವರೆಗೆ 10 ದಿನಗಳು ಜಿಲ್ಲೆಯ [illegible] 30 ಕ್ಕೂ ಹೆಚ್ಚು ಹಳ್ಳಿಗಳಲ್ಲಿ ಜಾಥ ಸಂಚರಿಸಿ ಹಾಡುಗಳು ಬೀದಿ ನಾಟಕಗಳ ಮೂಲಕ ಜನಜಾಗೃತಿಯನ್ನುಂಟು ಮಾಡುತ್ತಿರುವ ಬೀದರ ಸಮುದಾಯ ಘಟಕ ಶ್ಲಾಘನೀಯವಾದದು. ಮೇ 18 ರಂದು ಜನವಾಡದಿಂದ ಪ್ರಾರಂಭಗೊಂಡು ಕುಸನೂರ, ಕಮಲನಗರ, ಘೋರ ಚಿಂಚೋಳಿ, ಬಸವ ಕಲ್ಯಾಣ, ರಾಂಪೂರ, ಕಮಠಾಣಾ ಮೂಲಕ ಮತ್ತೆ ಬೀದರನ್ನು ಮೇ 28 ರಂದು ಜಾಥ ತಲುಪಿತು.

ಶಿಕ್ಷಕರ ಹೋರಾಟ ಬೆಂಬಲಿಸಿ ಪ್ರದರ್ಶನ

ಸಹ ಶಿಕ್ಷಕರ ಹಾಗೂ ಗುತ್ತಿಗೆ ಶಿಕ್ಷಕರು ರಾಜ್ಯದ್ಯಾಂತ ನಡೆಸುತ್ತಿರುವ ಹೋರಾಟವನ್ನು ಬೆಂಬಲಿಸಿ ಅವರ ಬೇಡಿಕೆಗಳನ್ನು ಕೂಡಲೇ ಈಡೇರಿಸಬೇಕೆಂದು ಒತ್ತಾಯಿಸಿ ಜುಲೈ 1 ರಂದು ಬೆಂಗಳೂರಿನ ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಡಿ.ವೈಎಫ್.ಐ.ಹಾಗೂಎಸ್ ಎಫ್. ಐ. ನ ಕಾರ್ಯಕರ್ತರು ಸದಾಶಿವ ನಗರದಲ್ಲಿ ಮೆರವಣಿಗೆ ನಡೆಸಿ ಉನ್ನತ ಶಿಕ್ಷಣ ಸಚಿವ ಡಾ. ಜೀವರಾಜ ಆಳ್ವ ರವರ ಮನೆ ಮುಂದೆ ಪ್ರತಿಭಟನಾ ಪ್ರದರ್ಶನ ನಡೆಸಿ ಸಚಿವರ ಅಪ್ತ ಸಹಾಯಕರಿಗೆ ಮನವಿ ಪತ್ರ ಅರ್ಪಿಸಿ ಸರ್ಕಾರ ಶಿಕ್ಷಕರ ಬೇಡಿಕೆಯ ಕುರಿತು ನಿರ್ಲಕ್ಷ್ಯ ಮನೋಭಾವ ತೊರೆದು ಮಾತುಕತೆನಡೆಸಿ ವಿದ್ಯಾರ್ಥಿ ಪೋಷಕರಿಗಾಗುತ್ತಿರುವ ತೊಂದರೆಯನ್ನು ಕೂಡಲೇ ನಿವಾರಿಸಬೇಕೆಂದ ಒತ್ತಾಯಿಸಲಾಯಿತು.

ಪ್ರದರ್ಶನಕಾರರನ್ನುದ್ದೇಶಿಸಿ ಮಹಿಳಾ ಸಂಘಟನೆಯ ಕಾ ಲೀಲಾವತಿ, ಡಿ. ವೈ. ಎಫ್. ಐ. ನ ರಾಜ್ಯ ಸಹ ಕಾರ್ಯದರ್ಶಿ ಕಾ. ಆರ್. ಜಯಕುಮಾರ್, ಜಿಲ್ಲಾ ಕಾರ್ಯದರ್ಶಿ ಕಾ. ಟಿ. ಶಿವಶಂಕರ್, ಎಸ್. ಎಸ್. ಐ. ಕಾರ್ಯದರ್ಶಿ ಕಾ. ಮೋಹನ್ ರವರುಗಳು ಮಾತನಾಡಿದರು.

ಕೋಲಾರ ಜಿಲ್ಲೆ ಮಹಿಳಾ ಸಂಘಟನಾ ಸಭೆ

ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ ಕೋಲಾರ ಜಿಲ್ಲಾ ಸಂಘಟನಾ ಸಮಿತಿ ಸಭೆ 19-6-88 ರಂದು ಕೋಲಾರದ ಪ್ರವಾಸಿ ಮಂದಿರದಲ್ಲಿ ಸೇರಿ ಹಲವಾರು ಸಂಘಟನಾತ್ಮಕ ತೀರ್ಮಾನಗಳನ್ನು ಕೈಗೊಳ್ಳಲಾಯಿತು. ಬಾಗೇಪಲ್ಲಿ, ಬಂಗಾರಪೇಟೆ, ಶಿಡ್ಲಘಟ್ಟ, ಮುಳಬಾಗಿಲು ತಾಲ್ಲೂಕುಗಳಲ್ಲಿ ಜುಲೈ ತಿಂಗಳಲ್ಲಿ ತಾಲೂಕು ಮಟ್ಟದ ಸಮಾವೇಶಗಳನ್ನು ನಡೆಸಲು ಹಾಗು ಜಿಲ್ಲೆಯಲ್ಲಿ 2 ಸಾವಿರ ಸದಸ್ಯತ್ವವನ್ನು ನೊಂದಾಯಿಸಲು ನಿರ್ಧರಿಸಲಾಯಿತು.

ಸತಿ ವಿರೋಧಿ ಮಸೂದೆಗೆ ಸೂಕ್ತ ತಿದ್ದುಪಡಿಗಳನ್ನು ಮಾಡದೆ ಸಹಿ ಹಾಕಬಾರದೆಂದು ರಾಷ್ಟ್ರಪತಿಗಳನ್ನು ಒತ್ತಾಯಿಸುವ ಮನವಿ ಪತ್ರಕ್ಕೆ ಜಿಲ್ಲೆಯಾದ್ಯಂತ 2 ಸಾವಿರ ಸಹಿಗಳನ್ನು ಸಂಗ್ರಹಿಸಿ ರಾಷ್ಟ್ರಪತಿಯವರಿಗೆ ಕಳುಹಿಸಿ ಕೊಡಲಾಗಿದೆ.

ಯುದ್ಧ ವಿರೋಧಿ ಸಭೆ

ಕೋಲಾರ ಜಿಲ್ಲಾ ಡಿ.ವೈ.ಎಫ್.ಐ ಆಶ್ರಯದಲ್ಲಿ 19-6-88 ರಂದು ಅಂತರ್ರಾಷ್ಟ್ರೀಯ ಪ್ರಜಾಸತ್ತಾತ್ಮಕ ಯುವ ಜನ ಫೆಡರೇಷನ್ ಡಬ್ಲ್ಯೂ ಎಫ್ ಡಿ ವೈ ಕರೆಯ ಮೇರೆಗೆ ಅಣ್ವಸ್ತ್ರ ವಿರೋಧಿ ಸಭೆಯನ್ನು ನಡೆಸಲಾಯಿತು. ನಂಜುಂಡಯ್ಯರವರು ಕಾರ್ಯಕ್ರಮ ಉದ್ಘಾಟಿಸಿದರು. ಸಂಘಟನೆಯ ಜಿಲ್ಲಾ ಅಧ್ಯಕ್ಷ ಪಿ. ಶ್ರೀನಿವಾಸ್, ಕಾರ್ಯದರ್ಶಿ ಆನಂದ್, ಖಜಾಂಚಿ ಕೃಷ್ಣಾರೆಡ್ಡಿ ಮೊದಲಾದರು ಮಾತನಾಡಿ ಶಾಂತಿ ಚಳುವಳಿಯ ಮಹತ್ವದ ಬಗ್ಗೆ ವಿವರಿಸಿದರು.

ಇಡೀ ದಿನ ನಡೆದ ಕಾರ್ಯಕ್ರಮದ ಅಂಗವಾಗಿ ಸಂಜೆವರೆಗೆ ಕೆ.ಜಿ. ಎಫ್. ಸಮುದಾಯ ಘಟಕದಿಂದ ಬೀದಿ ನಾಟಕ ಹಾಗು ಯುದ್ಧ ವಿರೋಧಿ ಹಾಡುಗಳ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

KRNW/BGS-312

MAG [2] PRB DECR 319/-78-79

ರಾಜೀವ ಗಾಂಧಿ ರಾಜೀನಾಮೆ ಒತ್ತಾಯ

(1ನೇ ಪುಟದಿಂದ)

ಸಂಘಟನೆಯ ಮನೋಬಲ ಕಾದುಕೊಳ್ಳುವ ಈ ರೀತಿಯ ಪ್ರಯತ್ನ ನಿಷ್ಪ್ರಯೋಜಕ.

ಕನಿಷ್ಟ ಅಲಹಾಬಾದಿನಲ್ಲಿ ತಮ್ಮ ಸೋಲು ಖಂಡಿತ ಎಂದು ಪ್ರಮುಖ ಕಾಂಗ್ರೆಸ್ (ಐ) ಮುಖಂಡರು ನಿರೀಕ್ಷಿಸಿದ್ದರೆಂಬುದು ಸ್ಪಷ್ಟ. ಕೊನೇನಿಮಿಷದಲ್ಲಷ್ಟೇ ತಮ್ಮ ಅಭ್ಯರ್ಥಿಯ ಬಗ್ಗೆ ತಿಳಿಯಪಡಿಸಿದ್ದು, ರಾಜೀವಗಾಂಧಿಯನ್ನು ಈ ಚುನಾವಣಾ ಪ್ರಚಾರದಿಂದ ದೂರವಿಟ್ಟದ್ದು ಇದಕ್ಕೇ. ಆದರೂ ಚುನಾವಣೆಗೆಲ್ಲಲು ಕಾಂಗ್ರೆಸ್ (ಐ) ಎಲ್ಲಾ ತಂತ್ರಗಳನ್ನೂ ಬಳಸಿತು. ಟಿ. ವಿ. ಧಾರಾವಾಹಿ ರಾಮಾಯಣದ ರಾಮ ಪಾತ್ರಧಾರಿಯನ್ನು ಅಲಹಾಬಾದಿಗೆ ಕರೆಸಿ ಕಾಂಗ್ರೆಸ್ (ಐ) ಮುಖಂಡರು ಚುನಾವಣಾ ಪ್ರಚಾರದ ವೇದಿಕೆಗಳಿಂದ "ರಾಮಚಂದ್ರ ಕೀಜೈ" ಮುಂತಾಗಿ ಎಲ್ಲಾ ಜಾತಿ–ಕೋಮುಗಳ ಭಾವನೆಗಳನ್ನು ಉದ್ದೀಪನಗೊಳಿಸಲು ಪ್ರಯತ್ನಿಸಿದರೇ ಹೊರತು ರಾಜಕೀಯ ಪ್ರಶ್ನೆಗಳನ್ನು ಜನತೆಯ ಮುಂದೆ ಇಡಲೇ ಇಲ್ಲ. ಆಳುವ ಪಕ್ಷದ ಅಧೋಗತಿಯನ್ನು ಇದು ತೋರುತ್ತದೆ. ಜತೆಗೆ ಅಂತರಿಕ ಗುಂಪುಕಿತ್ತಾಟ.

ಇದೇ ನೀತಿಗಳಿಲ್ಲದ, ಧೋರಣೆಗಳಿಲ್ಲದ, ಸ್ವಾರ್ಥಪರಾಯಣ ಜನಗಳ ಜಂಗುಳಿಯಂತಿರುವ, ರಾಜೀವ್ ನೇತೃತ್ವದ ಮುರುಕಲು ಪಕ್ಷ.

ಆದರೂ ಕಾಂಗ್ರೆಸ್ (ಐ) ಜನಬೆಂಬಲವನ್ನು ಸಂಪೂರ್ಣವಾಗಿ ಕಳಗೊಂಡಿದೆ ಎಂದು ಭಾವಿಸುವುದು ತಪ್ಪಾಗುತ್ತದೆ. ಅದಕ್ಕಿನ್ನೂ ದೊಡ್ಡ ಬೆಂಬಲವಿದೆ. ಆದರೆ ವಿರೋಧ ಪಕ್ಷಗಳು ಆಳುವ ಪಕ್ಷದ ಸಮಯ ಸಾಧಕ ತಂತ್ರಗಳನ್ನು ಅನುಸರಿಸದೆ ನೀತಿಬದ್ಧ ನಿಲುವು ತಳೆದರೆ ಕಾಂಗ್ರೆಸ್ (ಐ)ನ್ನು ಸೋಲಿಸುವುದು ಸಾಧ್ಯ

ಕಾಂಗ್ರೆಸ್ (ಐ) ಈ ಉಪಚುನಾವಣೆಗಳಿಂದ ಪಾಠಕಲಿಯುತ್ತದೆ. ಆದರೆ ಎಂತಹ ಪಾಠ ? ಎಲ್ಲಾ ರೀತಿಯ ಸಮಯ ಸಾಧಕ, ಕೋಮುವಾದಿ ಹಾಗೂ ಸಂಕುಚಿತ ಧೋರಣೆಗಳ ಸಂಘಟನೆಗಳೊಂದಿಗೆ ಶಾಮೀಲಾಗದಿದ್ದರೆ ತಾನು ಯಾವ ಚುನಾವಣೆಯನ್ನು ಗೆಲ್ಲಲು ಸಾಧ್ಯವಿಲ್ಲ ಎಂಬುದೇ ಅದು ಕಲಿಯುವ ಪಾಠ !

ಮುಂದಿನ ಚುನಾವಣೆಗಳಲ್ಲಿ ಆಳುವ ಪಕ್ಷದಿಂದ ಈದಿಕ್ಕಿನಲ್ಲಿ ತೀವ್ರ ಸವಾಲುಗಳನ್ನು ಎದುರಿಸಬೇಕಾಗಿ ಬರುತ್ತದೆ ಎಂದು ವಿರೋಧ ಪಕ್ಷಗಳು ಈಗಲೇ ಅರಿತುಕೊಂಡು ಅದನ್ನು ಎದುರಿಸಲು ಸಿದ್ಧವಾಗದಿದ್ದರೆ, ಗೆಲುವು ನಿಶ್ಚಿತವಲ್ಲ. ವಿರೋಧ ಪಕ್ಷಗಳೂ ಕೂಡ ಕಾಂಗ್ರೆಸ್ (ಐ) ನ ಆಟವನ್ನೇ ಆಡಲು ಯತ್ನಿಸಿದರೆ ಅವು ಹೋರಾಟ ಶೀಲ ಜನಸಮೂಹಗಳ ನಂಬಿಕೆಗಳಿಸಲು ಸಾಧ್ಯವಿಲ್ಲ.

ಮುಂದಿನ ಸಾರ್ವತ್ರಿಕ ಚುನಾವಣೆ ಪ್ರಮುಖ ಧೋರಣೆಗಳು, ರಾಷ್ಟ್ರೀಯ ಐಕ್ಯತೆ, ವಿಚ್ಛಿದ್ರಕಾರೀ ಶಕ್ತಿಗಳು ಮತ್ತು ಕಾಂಗ್ರೆಸ್ (ಐ) ನ ಆರ್ಥಿಕ ಧೋರಣೆಗಳ ಪ್ರಶ್ನೆಗಳ ಮೇಲೆ ನಡೆಯುಲಿವೆ. ಈ ಪ್ರಶ್ನೆಗಳ ಮೇಲೆ ಹಾಗೂ ಜನತೆಯ ತಕ್ಷಣದ ಬೇಡಿಕೆಗಳನ್ನು ಹೇಗೆ ಈಡೇರಿಸಿಕೊಳ್ಳುವುದು ಎಂಬ ಪ್ರಶ್ನೆಗಳ ಮೇಲೆ ಎಡ ಹಾಗೂ ಪ್ರಜಾಪ್ರಭುತ್ವವಾದೀ ಪಕ್ಷಗಳ ನಡುವೆ ಒಂದು ಸಮಾನ ತಿಳುವಳಿಕೆಯ ಆಧಾರದ ಮೇಲಷ್ಟೇ ವಿರೋಧ ಪಕ್ಷಗಳು ಕಾಂಗ್ರೆಸ್ (ಐ) ನ್ನು ಸೋಲಿಸಿ, ಪ್ರತಿಗಾಮಿಗಳಿಗೆ ಮುಖ ಭಂಗಮಾಡಿ ದೇಶವನ್ನು ರಕ್ಷಿಸಲು ಸಾಧ್ಯ.

ಈ ಎಚ್ಚರಿಕೆ ಅತ್ಯಗತ್ಯ. ಏಕೆಂದರೆ ಇದು ಈ ಉಪಚುನಾವಣೆಗಳಲ್ಲಿ ಹೆಚ್ಚಿನ ಕ್ಷೇತ್ರಗಳಲ್ಲಿ ಮೂಲಭೂತ ಧೋರಣೆಗಳ ಪ್ರಶ್ನೆಯನ್ನು ವಿರೋಧ ಪಕ್ಷಗಳು ಎತ್ತಲೇ ಇಲ್ಲ. ಕೇವಲ ಸ್ಥಳೀಯ ಪ್ರಶ್ನೆಗಳು ಹಾಗೂ ಕೆಲವೊಮ್ಮೆ ಕಾಂಗ್ರೆಸ್ (ಐ) ನಂತೆಯೇ ಸಮಯ ಸಾಧಕ ಹಾಗೂ ಪ್ರತಿಗಾಮೀ ತಂತ್ರಗಳು ಕೂಡಾ ಕಂಡುಬಂದವು.

ವಿ ಪಿ. ಸಿಂಗ್ ಕಾಂಗ್ರೆಸ್ (ಐ) ಅಭ್ಯರ್ಥಿಗಿಂತ ಬಹಳ ಹೆಚ್ಚು ಮತ ಪಡೆದು ಗೆದ್ದಿರುವುದು ಒಳ್ಳೆಯದೇ. ಅವರಿಗೆ ಆರ್.ಎಸ್.ಎಸ್. ಹಾಗೂ ಇಮಾಂ ಇಬ್ಬರದ್ದು ಬೆಂಬಲವಿತ್ತು. ಸಾಮಾನ್ಯವಾಗಿ ಹಿಂದೂಗಳು ಹಾಗೂ ಮುಸ್ಲಿಮರು ಜೊತೆಯಾಗಿ ಮತನೀಡಿದರೆ ಅದು ಎಲ್ಲಾ ಪ್ರಜಾಪ್ರಭುತ್ವವಾದಿ ಹಾಗೂ ರಾಷ್ಟ್ರೀಯವಾದಿ ಶಕ್ತಿಗಳಿಗೆ ತೃಪ್ತಿ ನೀಡುವ ವಿಷಯ.ಆದರೆ ಅವರು ಬೇರೆ ಬೇರೆ ಕಾರಣಗಳಿಗಾಗಿ ಜತೆಯಾಗಿ ಮತ ನೀಡಿದಾಗ ಅದು ಬೇರೆಯೇ ಸಂಗತಿಯಾಗುತ್ತದೆ. ಯಾಕೆಂದರೆ ಕಾಂಗ್ರೆಸ್ (ಐ) ತನ್ನ ತಂತ್ರದಲ್ಲಿ ತುಸುವೇ ಬದಲಾವಣೆ ಮಾಡಿಕೊಂಡರೆ ಈ ಪರಸ್ಪರ ವಿರೋಧಿ ಕೋಮು ಶಕ್ತಿಗಳು ಸುಲಭವಾಗಿ ಕಾಂಗ್ರೆಸ್ (ಐ)ಗೆ ಮತ ನೀಡುತ್ತವೆ.

ಕಾಂಗ್ರೆಸ್ (ಐ) ಸೋಲಿನಿಂದ ವಿರೋಧ ಪಕ್ಷಗಳು ತೃಪ್ತಿ ಪಟ್ಟುಕೊಳ್ಳಬಹುದು. ಅದರೊಂದಿಗೇ ಯಶಸ್ವಿಗೆ ಕಾರಣವಾದ ಅಂಶಗಳನ್ನು ಅರಿಯಬೇಕು. ಕೇವಲ ಎಲ್ಲಾ ವಿರೋಧ ಪಕ್ಷಗಳು ಜೊತೆ ಸೇರಿದ್ದರಿಂದಷ್ಟೇ ಈ ದೊಡ್ಡ ಗೆಲುವು ಸಾಧ್ಯವಾಯಿತು ಎಂದು ಭಾವಿಸಿದರೆ ದೇಶದ ರಾಜಕೀಯ ಶಕ್ತಿಗಳನ್ನು ನಾವು ತಪ್ಪಾಗಿ ಅರ್ಥ ಮಾಡಿಕೊಂಡಂತಾಗುತ್ತದೆ. ಆಗ ಸತತ ಮತ ಭೇದಗಳು ಹಾಗೂ ಕಿತ್ತಾಟಗಳನ್ನು ಮರೆಮಾಚಿ ಪಕ್ಷಗಳ, ಮುಖಂಡರ ವಿಪರೀತ ಕೇಳಿಕೆಗಳಿಗೇ ಹೆಚ್ಚಿನ ಪ್ರಾಶಸ್ತ್ಯ ಬರುತ್ತದೆ.

ವಿರೋಧ ಪಕ್ಷಗಳ ಗೆಲುವಿಗೆ ರಾಜೀವ್ ಸರ್ಕಾರದ ಧೋರಣೆಗಳ ವಿರುದ್ಧ ಜನ ಸಮೂಹಗಳಲ್ಲಿನ ತೀವ್ರ ಅಸಂತೃಪ್ತಿ ಒಂದು ಮುಖ್ಯ ಕಾರಣ ಎಂಬುದನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಡಿಸೆಂಬರ್ 9ರ ರ್‍ಯಾಲಿ, ಭಾರತ್ ಬಚಾವೋ ದಿನಾಚರಣೆ, ಭಾರತ್ ಬಂದ್, ಇಪ್ಪತ್ತು ಲಕ್ಷಕ್ಕೂ ಹೆಚ್ಚು ರೈತರು ಹಾಗೂ ಕೃಷಿ ಕೂಲಿಕಾರರು ಜೈಲು ತುಂಬಿದ ಕಿಸಾನ್ ಸಭಾದ ಕಾರ್ಯಕ್ರಮ ಇವೆಲ್ಲಾ ಜನ ಸರಿಯಾದ ನಾಯಕತ್ವ ದೊರೆತರೆ ಮುನ್ನುಗ್ಗಲು ಸಿದ್ಧರಿದ್ದಾರೆ ಎಂದು ತೋರಿಸಿಕೊಟ್ಟದ್ದವು.

ಆದ್ದರಿಂದ ಈ ಅಸಂತೃಪ್ತಿಯನ್ನು ಪ್ರಜಾಪ್ರಭುತ್ವವಾದೀ ಮಾರ್ಗದತ್ತ ಹೊರಳಿಸಿ, ಕೋಮುವಾದಿ, ಪ್ರತ್ಯೇಕತಾವಾದಿ ಹಾಗೂ ಸಂಕುಚಿತವಾದೀ ಶಕ್ತಿಗಳು ಇದನ್ನು ವಿಚ್ಛಿದ್ರಗೊಳಿಸದಂತೆ ನೋಡಿಕೊಂಡು ಕಾಂಗ್ರೆಸ್(ಐ)ನ್ನು ಸೋಲಿಸುವುದು ಈಗ ಜಾತ್ಯಾತೀತ ವಿರೋಧ ಪಕ್ಷಗಳು ಮತ್ತು ಎಡ ಪಕ್ಷಗಳ ಮೇಲಿರುವ ಜವಾಬ್ದಾರಿ.

ಎಡ ಪಕ್ಷಗಳ ಐಕ್ಯತೆ ಈ ಸನ್ನಿವೇಶದಲ್ಲಿ ಮಹತ್ವದ ಪಾತ್ರವಹಿಸಬೇಕಾಗಿದೆ. ಕೇವಲ ಎಲ್ಲಾ ತರದ ಪಕ್ಷಗಳನ್ನೂ ಒಟ್ಟುಸೇರಿಸುವುದರ ವಿರುದ್ಧ ಜಾತ್ಯಾತೀತ ವಿರೋಧ ಪಕ್ಷಗಳಿಗೆ ಎಡ ಪಕ್ಷಗಳು ಎಚ್ಚರ ನೀಡಬೇಕಾಗುತ್ತದೆ. ಇಲ್ಲವಾದರೆ ವಿರೋಧ ಪಕ್ಷಗಳ ಕೂಟ ಕೂಡಾ ರಾಷ್ಟ್ರೀಯ ಐಕ್ಯತೆಯನ್ನು ಮರೆತು ಕೇವಲ ಚುನಾವಣೆ ಗೆಲ್ಲಲು ಕಟ್ಟಿಕೊಂಡ ಸಮಯ ಸಾಧಕ ಕೂಟವಾಗುತ್ತದೆ. ಅಲ್ಲದೆ ಈ ಜಾತ್ಯಾತೀತ ವಿರೋಧ ಪಕ್ಷಗಳು ತಮ್ಮ ಅಂತರಿಕ ಐಕ್ಯತೆಯನ್ನು ರಕ್ಷಿಸಿಕೊಳಬೇಕು. ಇಲ್ಲವಾದರೆ ಕರ್ನಾಟಕದಲ್ಲಿ ಜನತಾ ಪಕ್ಷದಲ್ಲಿ ಈಗ ನಡೆಯುತ್ತಿರುವಂತಹ ಸಂಗತಿಗಳು ವಿರೋಧ ಪಕ್ಷಗಳ ಐಕ್ಯತೆಯ ಬಗ್ಗೆ ಜನತೆಯ ನಂಬಿಕೆಯನ್ನು ಬುಡಮೇಲು ಮಾಡುತ್ತವೆ.

ಈ ದೌರ್ಬಲ್ಯಗಳನ್ನು ನಿವಾರಿಸಿಕೊಂಡು ಎಡ ಮತ್ತು ಜಾತ್ಯಾತೀತ ಶಕ್ತಿಗಳುತುರ್ತಾಗಿ ಮುನ್ನಡೆಯಬೇಕು ರಾಜೀವಗಾಂಧಿಯವರ ರಾಜೀನಾಮೆಗಾಗಿ ಒತ್ತಾಯಿಸಬೇಕು. ಚುನಾವಣಾ ಫಲಿತಾಂಶಗಳ ಮಹತ್ವವನ್ನು, ಕಾಂಗ್ರೆಸ್ (ಐ) ಜನತೆಯಿಂದ ಹೇಗೆ ದೂರವಾಗಿದೆ, ಹೇಗೆ ಅದು ಸರ್ಕಾರದಲ್ಲಿ ಮುಂದುವರಿಯುವ ನೈತಿಕ ಮತ್ತು ರಾಜಕೀಯ ಹಕ್ಕನ್ನು ಕಳಕೊಂಡಿದೆ ಎಂದು ದೇಶಾದ್ಯಂತ ರ್‍ಯಾಲಿಗಳನ್ನು, ಸಾರ್ವಜನಿಕ ಸಭೆಗಳನ್ನು ನಡೆಸಿ ವಿವರಿಸಬೇಕು. ರಾಜೀವ್‌ಗಾಂಧಿ ರಾಜೀನಾಮೆಯ ಒತ್ತಾಯವನ್ನು ದೇಶಾದ್ಯಂತ ಜನಜನಿತಗೊಳಿಸಬೇಕು.

(ಪಿ.ಡಿ. ಸಂಪಾದಕೀಯದಿಂದ)

ಗುಂಪುಗಾರಿಕೆ ಬಿಟ್ಟು ಒಂದಾಗಿ

(1ನೇ ಪುಟದಿಂದ)

ವಾಗಿ ಪದವೀಧರರ ಮತ್ತು ಶಿಕ್ಷಕರ ಕ್ಷೇತ್ರಗಳ ಚುನಾವಣೆಗಳಲ್ಲಿ ಸಂಪೂರ್ಣ ಸೋಲನ್ನನುಭವಿಸಬೇಕಾಗಿ ಬಂದಿದೆಯಲ್ಲದೆ, ಪದವೀಧರ ಕ್ಷೇತ್ರದ ಮೂರು ಸ್ಥಾನಗಳು ಬಿ.ಜೆ.ಪಿ. ಗೆ ಲಭ್ಯವಾಗುವಂತೆ ಮಾಡಿರುವುದು ಅತಿ ದೊಡ್ಡ ಅನ್ಯಾಯವೆಂದು ಪರಿಗಣಿಸುತ್ತದೆ. ಆದರಿಂದಲೂ ಪಾಠ ಕಲಿಯದ ಜನತಾ ಮುಖಂಡರು ಸ್ಥಳೀಯ ಸಂಸ್ಥೆಗಳ ಕ್ಷೇತ್ರದಲ್ಲಿ ನಡೆಯಲಿರುವ ಚುನಾವಣೆಯಲ್ಲಿ ಒಮ್ಮತದ ಅಭ್ಯರ್ಥಿಗಳನ್ನು ನಿಲ್ಲಿಸುವುದರಲ್ಲಿ ವಿಫಲರಾಗಿರುವುದನ್ನು ಖಂಡಿಸಿದೆ. ಅದು ಆರೋಗ್ಯಕರವಾದ ಲಕ್ಷಣವಲ್ಲ ಎಂಬಂಶವನ್ನು ರಾಜ್ಯ ಸಮಿತಿ ರಾಮಕೃಷ್ಣ ಹೆಗಡೆ ಮತ್ತು ಜೀವೇಗೌಡರಬ್ಬರಿಗೂ ತೋರ್ಪಡಿಸಿ ಎಚ್ಚರಿಕೆ ನೀಡಬಯಸುತ್ತದೆ. ತಮ್ಮ ಭಿನ್ನಾಭಿಪ್ರಾಯಗಳನ್ನು ಬೀದಿಯಲ್ಲಿ ತೋರಿಕೊಳ್ಳುವ ಕ್ರಮ ಕಾಂಗ್ರೆ ಬಿಜೆಪಿ ಯಂಥವರಿಗೆ ಮಾತ್ರ ಲಾಭದಾಯಕವಾಗುತ್ತದೆ. ಆದ ಕಾರಣ ದೇಶದ ಹಾಗೂ ರಾಜ್ಯದ ಹಿತದೃಷ್ಟಿಯಿಂದ ಸೌಹಾರ್ದಯುತ ಚರ್ಚೆ ಮೂಲಕ ಸಮಸ್ಯೆ ಬಗೆ ಹರಿಸಿ ಜನಪರವಾದ ಧೋರಣೆಯನ್ನು ಕಾರ್ಯರೂಪದಲ್ಲಿ ತರಲು ಪ್ರಯತ್ನ ಮಾಡಬೇಕೆಂದು ರಾಜ್ಯ ಸಮಿತಿ ಕರೆ ಕೊಟ್ಟಿದೆ ಮಾತ್ರವಲ್ಲ, ಜನಪರ ಧೋರಣೆಯ ಅನುಷ್ಠಾನದಲ್ಲಿ, ಕಾರ್ಮಿಕರ ರೈತರ ಸಮಸ್ಯೆಗಳಿಗೆ ಪರಿಹಾರ ಒದಗಿಸುವುದರಲ್ಲಿ ಸಿಪಿಐ (ಎಂ) ಪಕ್ಷವನ್ನು, ಪ್ರಾಂತ ರೈತ ಸಂಘ, ಸಿ ಐ ಟಿ ಯು ವನ್ನೂ ವಿಶ್ವಾಸದಲ್ಲಿ ತೆಗೆದುಕೊಳ್ಳಬೇಕೆಂದೂ, ಅವರ ಸಹಕಾರ ಪಡೆಯಬೇಕೆಂದೂ ಕೇಳಿಕೊಂಡಿದೆ.

ದೆಹಲಿಯಲ್ಲಿ ಎಡಪಕ್ಷಗಳ ನೇತೃತ್ವದ ಬೃಹತ್ ರ್‍ಯಾಲಿ ಹಾಗೂ ಎಲ್ಲಾ ಜಾತ್ಯಾತೀತ ವಿರೋಧ ಪಕ್ಷಗಳ ಐಕ್ಯಕ್ರಿಯೆ ಭಾರತ ಬಂದ್‌ಗಳ ಹಿನ್ನೆಲೆಯಲ್ಲಿ ಇತ್ತೀಚೆಗೆ ನಡೆದ ಉಪ ಚುನಾವಣೆಗಳು ಇಡೀ ದೇಶದ ಸಾಮಾನ್ಯ ಜನತೆ ಕಾಂಗ್ರೆಸ್ ವಿರೋಧಿ ಶಕ್ತಿಗಳಿಗೆ ಬೆಂಬಲ ನೀಡುತ್ತಿರುವ ಮಹತ್ವದ ಸಂದರ್ಭ ಇದು. ಇಂತಹ ಸನ್ನಿವೇಶದಲ್ಲಿ ಪ್ರಜಾಪ್ರಭುತ್ವ ಶಕ್ತಿಗಳು ಒಂದಾಗಿ ಜನತೆಯ ನಂಬುಗೆಯ ನೇತಾರರಾಗಿ ಪ್ರವರ್ತಿಸುವುದನ್ನು ಬಿಟ್ಟು ಒಳ ಜಗಳಗಳಿಂದ ಜನತೆಯ ನೆಚ್ಚಿಕೆಯನ್ನು ಕಳೆದುಕೊಳ್ಳುತ್ತಿರುವುದು ಅಕ್ಷಮ್ಯ. ಇಂಥ ಸಂದರ್ಭದ ಸದುಪಯೋಗ ಪಡೆದು ಬಲ ಸಂವರ್ಧನೆ ಮಾಡಿಕೊಳ್ಳದೆ, ತಮ್ಮನ್ನು ನಂಬಿದ ಜನರಿಗೆ ಮೋಸ ಮಾಡುತ್ತಿದ್ದಾರೆ ಜನತಾ ಮುಖಂಡರು. ಅವರು ಕೂಡಲೇ ಐಕ್ಯ ಸಾಧಿಸಬೇಕೆಂದು ಸಿಪಿಐ (ಎಂ) ರಾಜ್ಯ ಸಮಿತಿ ಮತ್ತೊಮ್ಮೆ ಜನತಾ ಮುಖಂಡರನ್ನು ಒತ್ತಾಯಿಸುತ್ತದೆ. ಹಾಗೆ ಮಾಡದಿದ್ದರೆ, ಪರಿಸ್ಥಿತಿ ಹದಗೆಟ್ಟು ಆದರ ಲಾಭ ಕಾಂಗ್ರೆ ಮತ್ತು ಜಾತೀಯವಾದಿ ಪಕ್ಷಗಳು ಪಡೆಯುವುದರಲ್ಲಿ ಸಂಶಯವಿಲ್ಲೆಂದೂ ಎಚ್ಚರಿಸಿದೆ.

ಚುನಾವಣೆಯಲ್ಲಿ ಜನತಾಕ್ಕೆ ಬೆಂಬಲ

(1 ನೇ ಪುಟದಿಂದ)

ಗಳು (ಬೆಳಗಾವಿ, ಬಿಜಾಪುರ, ಬಾಗಲಕೋಟೆ, ರಾಯಚೂರು) ಈಗಾಗಲೇ ಕೆಲಸ ನಿಲ್ಲಿಸಿ ಸಾವಿರಾರು ಕೆಲಸಗಾರರನ್ನು ಬೀದಿ ಪಾಲಾಗಿ ಮಾಡಿರುವುದನ್ನು ರಾಜ್ಯ ಸಮಿತಿ ಖಂಡಿಸಿ ಈ ಗಿರಣಿಗಳು ಪುನರಾರಂಭವಾಗುವಂತೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸರಕಾರವನ್ನು ಒತ್ತಾಯಿಸಿದೆ.

ರೈತರ ಕೃಷಿ ಕಾರ್ಮಿಕರ ಜೈಲ್ ಭರೋ ಕಾರ್ಯಕ್ರಮ

ಹೆಚ್ಚುವರಿ ಪಡ, ಫಾರೆಸ್ಟ್ ಸಿ ಮತ್ತು ಡಿ ಭೂಮಿಯ ಹಂಚಿಕೆ, ರೈತರಿಗೆ ಭೂಮಿಯ ಪಟ್ಟಾ, ನೀರಾವರಿ ಯೋಜನೆಗಳು, ಕೃಷಿ ಕಾರ್ಮಿಕರಿಗೆ ಕನಿಷ್ಟ ಕೂಲಿ, ಬೆಳೆಗೆ ಯೋಗ್ಯ ಬೆಲೆ ಮೊದಲಾದ ಬೇಡಿಕೆಗಳ ಸಲುವಾಗಿ ಸೆಪ್ಟೆಂಬರ್ 1ರಿಂದ 15 ರ ವರೆಗೆ ದೇಶಾದ್ಯಂತ ಜೈಲ್ ಭರೋ ಕಾರ್ಯಕ್ರಮ ಸಂಘಟಿಸಬೇಕೆಂದು ಅಖಿಲ ಭಾರತ ಕಿಸಾನ ಸಭಾ ಮತ್ತು ಕೃಷಿ ಕಾರ್ಮಿಕರ ಯೂನಿಯನ್ ಕರೆ ಕೊಟ್ಟಿದ್ದು, ನಮ್ಮ ರಾಜ್ಯದಲ್ಲಿಯೂ ಆ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಎಲ್ಲರೂ ಹೆಚ್ಚು ಪ್ರಯತ್ನ ಮಾಡಬೇಕೆಂದು ರಾಜ್ಯ ಸಮಿತಿ ತನ್ನ ಘಟಕಗಳಿಗೆ ಕರೆ ನೀಡಿದೆ.

Printed & Published by P. Ramachandra Rao on be half of the Communist Party of India [Marxist] Karnataka State Committee, K. V. Temple Street, Sulthanpet Bangalore-560053 Editorial and Managerial Office : L-56 K. V. Temple Street, Sultanpet B-53
Phone : 75331 UMA Printers B-53 Editor : P. Ramachandra Rao Managing Editor ; N .K .Upadhayaya